ಜೆಎಸ್‌ಎಸ್ ಮಾಸಪತ್ರಿಕೆ

ಜೆಎಸ್‌ಎಸ್ ಮಹಾವಿದ್ಯಾಪೀಠದ ವಾರ್ತಾಪತ್ರ

ಸಂಚಿಕೆ 80 **ಜುಲೈ 2009**

ಬರೆದಂತೆ ಬದುಕಿದ ವಚನಕಾರ ಘನಲಿಂಗ ಶಿವಯೋಗಿ - ಪ್ರೊ. ದೇಜಗೌ

ಬೆಂಗಳೂರಿನ ಬಸವ ಸಮಿತಿ ಮತ್ತು ಮೈಸೂರಿನ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಸಂಯುಕ್ತ ಆಶ್ರಯದಲ್ಲಿ ದಿನಾಂಕ 23.6.2009 ರಂದು, ಸರಸ್ವತಿಪುರಂ ಜೆಎಸ್‌ಎಸ್ ಪ್ರಾಥಮಿಕ ಶಾಲೆಯಲ್ಲಿ, ಘನಲಿಂಗ ಶಿವಯೋಗಿಗಳವರ ಕುರಿತು ಒಂದು ದಿನದ ವಿಚಾರಸಂಕಿರಣ ನಡೆಯಿತು.

ವಿಚಾರಸಂಕಿರಣವನ್ನು ಉದ್ಘಾಟಿಸಿದ ಖ್ಯಾತ ಸಾಹಿತಿ ಪ್ರೊ. ದೇಜಗೌರವರು "ಅಪಾರವಾದ ಅಧ್ಯಯನದ ಮೂಲಕ ಆಳವಾದ ಪಾಂಡಿತ್ಯವನ್ನು ಗಳಿಸಿದ್ದ ಶ್ರೀ ಘನಲಿಂಗ ಶಿವಯೋಗಿಗಳು ತಾವು ಓದಿ ಕಲಿತದ್ದನ್ನೇ ತಮ್ಮ ಜೀವನದಲ್ಲಿ ಅಳವಡಿಸಿಕೊಂಡ ಒಬ್ಬ ಮಹಾನ್ ಸಂತರಾಗಿದ್ದರು. ಲೌಕಿಕ ಸುಖಭೋಗಗಳಿಂದ ಮನುಷ್ಯನ ಉದ್ಧಾರ ಸಾಧ್ಯವಿಲ್ಲವೆಂದು ನಂಬಿದ್ದ ಅವರು ನಿರ್ವಾಣದಿಂದ ಮಾತ್ರ ಜೀವಿಯ ಉದ್ಧಾರ ಎಂದು ಸಾರಿದರು. ಶರಣಸತಿ-ಲಿಂಗಪತಿ ಭಾವದ ವಚನಗಳ ಮೂಲಕ ತಾವು ಕಂಡ ಸತ್ಯವನ್ನು ಜಗತ್ತಿಗೆ ಸಾರಿದರು. ನುಡಿದಂತೆ ನಡೆದ ಮಹಂತರು ಅವರು" ಎಂದು ನುಡಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಬಸವ ಸಮಿತಿಯ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬಸವ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಚ್.ಎಸ್. ರೇಣುಕಾಪ್ರಸಾದ್‌ರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ, ಶರಣ ಸಾಹಿತ್ಯದ ಪ್ರಚಾರಕ್ಕಾಗಿ ಬಸವ ಸಮಿತಿಯು ಕೈಗೊಂಡಿರುವ ಕಾರ್ಯಕ್ರಮಗಳನ್ನು ಸಭೆಗೆ ಪರಿಚಯಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀ ಎನ್. ಬಸವಾರಾಧ್ಯರ ಅಧ್ಯಕ್ಷತೆಯಲ್ಲಿ ನಡೆದ ಮೊದಲನೆಯ ಗೋಷ್ಠಿಯಲ್ಲಿ ಪ್ರೊ. ಚಂದ್ರಶೇಖರಯ್ಯ ಮತ್ತು ಡಾ. ಬಿ.ಎನ್. ಸುಮಿತ್ರಾಬಾಯಿ ಯವರು ಪ್ರಬಂಧಗಳನ್ನು ಮಂಡಿಸಿದರು. ಡಾ. ಎಂ.ಜಿ. ಈಶ್ವರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಎರಡನೆಯಲ್ಲಿ ಗೋಷ್ಠಿಯ ಶ್ರೀ ಜಯದೇವಪ್ಪ ಜೈನಕೇರಿ ಹಾಗೂ ಡಾ. ಬಿ. ನಂಜುಂಡಸ್ವಾಮಿಯವರು ಪ್ರಬಂಧ ಮಂಡನೆ ಮಾಡಿದರು.

ಮೈಸೂರು ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯದ ಪದವೀಧರರ ದಿನಾಚರಣೆಯನ್ನು ಭಾರತೀಯ ವೈದ್ಯ ಶಿಕ್ಷಣ ಮಂಡಳಿಯ ಉಪಾಧ್ಯಕ್ಷರಾದ ಡಾ. ಪಿ.ಸಿ. ಕೇಶವನ್ ಕುಟ್ಟಿ ಯವರು ಉದ್ಘಾಟಿಸುತ್ತಿದ್ದಾರೆ. ಚಿತ್ರದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಕುಲಪತಿಗಳಾದ ಡಾ. ಬಿ. ಸುರೇಶ್, ಶ್ರೀ ಬಿ.ಎನ್. ಬೆಟ್‌ಕೆರೂರ್, ಕುಲಸಚಿವ ಶ್ರೀ ಮೃತ್ಯುಂಜಯ ಪಿ. ಕುಳೇನೂರ್‌ರವರನ್ನು ಕಾಣಬಹುದು

ಊಟಿಯಲ್ಲಿ ಸಾರ್ವಜನಿಕರಿಗಾಗಿ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರದಲ್ಲಿ ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಬಿ. ಸುರೇಶ್, ಮಾಜಿ ಉಪ ಮುಖ್ಯಮಂತ್ರಿ ಶ್ರೀ ಎಂ.ಪಿ. ಪ್ರಕಾಶ್, ಡಾ. ಪದ್ಮಚಂದ್ರಾಜಿ ಮುನೀಜಿ, ಶ್ರೀ ಧುರಂಧರ ಮುನೀಜಿ ಮರಸ, ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು, ಶ್ರೀ ಸಿದ್ಧೇಶ್ವರ ಸ್ವಾಮೀಜಿ, ಶ್ರೀ ಲೂಕೋಸ್ ವಲ್ಲತ್ತರೈ ಹಾಗೂ ಬೆಂಗಳೂರಿನ ಕೈಗಾರಿಕೋದ್ಯಮಿ ಶ್ರೀ ಎಂ. ಶ್ರೀಕಂಠ ರುದ್ರ ಆರಾಧ್ಯರವರಿದ್ದಾರೆ

ಸುತ್ತೂರು ಶ್ರೀಕ್ಷೇತ್ರದಲ್ಲಿ ದಾದಿಯರಿಗಾಗಿ ಏರ್ಪಡಿಸಿದ್ದ ಪುನಶ್ಚೇತನ ಶಿಬಿರದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಗೌ.ನ್ಯಾ. ಶ್ರೀ ಕೆ.ಎಲ್. ಮಂಜುನಾಥ್‌ರವರು ಸಮಾರೋಪ ಭಾಷಣ ನೀಡಿದರು. ಚಿತ್ರದಲ್ಲಿ ಸುತ್ತೂರು ಶ್ರೀಗಳು, ಶ್ರೀ ಸಿದ್ಧೇಶ್ವರ ಸ್ವಾಮಿಗಳು, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎಚ್. ಬಸವನಗೌಡರವರು, ಸಾಹಿತಿಗಳಾದ ಶ್ರೀಮತಿ ವೀಣಾ ಬನ್ನಂಜೆಯವರು, ಶ್ರೀಮತಿ ಮಂಜುನಾಥ್ ಹಾಗೂ ಡಾ. ಬಿ. ಸುರೇಶ್‌ರವರನ್ನು ಕಾಣಬಹುದು

ಘನಲಿಂಗ ಶಿವಯೋಗಿಗಳು - ವಿಚಾರಸಂಕಿರಣ ವರದಿ

ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಬೆಂಗಳೂರಿನ ಬಸವ ಸಮಿತಿಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 23.5.2009 ರಂದು ನಗರದ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲಾ ಸಭಾಂಗಣದಲ್ಲಿ ಏರ್ಪಡಿಸಿದ್ದ ಘನಲಿಂಗ ಶಿವಯೋಗಿಗಳ ಕುರಿತ ಒಂದು ದಿನದ ವಿಚಾರಸಂಕಿರಣ ನಡೆಯಿತು.

ವಿಚಾರಸಂಕಿರಣವನ್ನು ಉದ್ಘಾಟಿಸಿದ ಹಿರಿಯ ಸಾಹಿತಿ ಪ್ರೊ. ದೇಜಗೌರವರು ಮಾತನಾಡಿ "ಅಪಾರ ಅಧ್ಯಯನದ ಮೂಲಕ ಮಹಾನ್ ಅನುಭಾವಿಗಳಾಗಿದ್ದ ಘನಲಿಂಗ ಶಿವಯೋಗಿಗಳು ತಾವು ಕಲಿತದ್ದನ್ನೇ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದ ಶ್ರೇಷ್ಠ ಸಂತರಾಗಿದ್ದರು. ಲೌಕಿಕ ಸುಖ ಸಂತೋಷಗಳಿಂದ ಮನುಷ್ಯನ ಉದ್ಧಾರ ಸಾಧ್ಯವಿಲ್ಲ, ನಿರ್ವಾಣದಿದ ಮಾತ್ರ ಮುಕ್ತಿ ಎಂದರು; ನುಡಿದಂತೆ ನಡೆದರು, ಬದುಕಿದರು" ಎಂದು ನುಡಿದರು. "ಘನಲಿಂಗ ಶಿವಯೋಗಿಗಳಿಗೆ ಶ್ರೀ ತೋಂಟದ ಸಿದ್ಧಲಿಂಗ ಯತಿಗಳಂಥ ಗುರುವರ್ಯರ ಮಾರ್ಗದರ್ಶನ ಸಿಕ್ಕಿತು. ಶಿವಯೋಗಿಗಳಿಗೂ ಅಷ್ಟೆ, ತಮ್ಮ ಗುರುವಿನಲ್ಲಿ ಅಪಾರವಾದ ಭಕ್ತಿ ಮತ್ತು ನಿಷ್ಠೆ. ಅವರ ವಚನಗಳು ತಮ್ಮ ಭಾವಗೀತಾತ್ಮಕ ಗುಣದಿಂದ ವಚನಸಾಹಿತ್ಯದಲ್ಲಿ ವಿಶೇಷವಾದ ಸ್ಥಾನವನ್ನು ಪಡೆದಿವೆ" ಎಂದು ಬಣ್ಣಿಸಿದರು.

ಬೆಂಗಳೂರಿನ ಬಸವ ಸಮಿತಿಯ ಎಚ್.ಎಸ್. ರೇಣುಕಾಪ್ರಸಾದ್ ಮಾತನಾಡಿ, ವೀರಶೈವ ಧರ್ಮದ ಹೆಮ್ಮೆಯಾದ ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಮುಂತಾದವರು ಸಮಾಜದ ಸುಧಾರಣೆಯ ಉದ್ದೇಶದಿಂದ ರಚಿಸಿದ ವಚನಸಾಹಿತ್ಯದ ಮಹತ್ವವನ್ನು ದೇಶಾದ್ಯಂತ ಸಾರುವ ಸಲುವಾಗಿ ಬಸವ ಸಮಿತಿಯು ಅನೇಕ ವಿಚಾರಸಂಕಿರಣಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದೆ ಎಂದರು.

ಈಗಾಗಲೇ 25 ಭಾರತೀಯ ಭಾಷೆಗಳಿಗೆ ಹಾಗೂ 5 ವಿದೇಶಿ ಭಾಷೆಗಳಿಗೆ 2,500 ವಚನಗಳ ಭಾಷಾಂತರ ಕಾರ್ಯ ತೀವ್ರಗತಿಯಲ್ಲಿ ನಡೆಯುತ್ತಿದೆ ಎಂದರು. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರು ವಿಚಾರಸಂಕಿರಣ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಎನ್. ಬಸವಾರಾಧ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಮೊದಲನೆಯ ಗೋಷ್ಠಿಯಲ್ಲಿ 'ಘನಲಿಂಗ ಶಿವಯೋಗಿಗಳ ಜೀವನ ಸಾಧನೆ' ಮತ್ತು 'ಘನಲಿಂಗ ಶಿವಯೋಗಿಗಳ ವಚನಗಳಲ್ಲಿ ಸತಿಪತಿ ಭಾವ' ಎಂಬ ವಿಷಯಗಳ ಕುರಿತು ಪ್ರೊ. ಚಂದ್ರಶೇಖರಯ್ಯ ಮತ್ತು ಡಾ. ಬಿ.ಎನ್. ಸುಮಿತ್ರಾಬಾಯಿ ಅನುಕ್ರಮವಾಗಿ ವಿಚಾರ ಮಂಡನೆ ಮಾಡಿದರು.

ದಾವಣಗೆರೆಯಲ್ಲಿ ಎಂಎಸ್‌ಬಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಜಿ. ಈಶ್ವರಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆದ ಎರಡನೆಯ ಗೋಷ್ಠಿಯಲ್ಲಿ "ಘನಲಿಂಗ ಶಿವಯೋಗಿಗಳ ವಚನಗಳು ಒಂದು ಸಮೀಕ್ಷೆ" ಮತ್ತು "ತೋಂಟದ ಸಿದ್ಧಲಿಂಗ ಯತಿಗಳು ಹಾಗೂ ಘನಲಿಂಗ ಶಿವಯೋಗಿಗಳು" ಎಂಬ ವಿಷಯದ ಮೇಲೆ ಶ್ರೀ ಜಯದೇವಪ್ಪ ಜೈನಕೇರಿ ಹಾಗೂ ಡಾ. ಬಿ. ನಂಜುಂಡಸ್ವಾಮಿಯವರು ಅನುಕ್ರಮವಾಗಿ ವಿಚಾರ ಮಂಡಿಸಿದರು.

ಅದೇ ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಓ.ಎಲ್. ನಾಗಭೂಷಣಸ್ವಾಮಿಯವರು ಸಮಾರೋಪ ಭಾಷಣ ಮಾಡಿದರು. ಬೇಲಿಮಠದ ಶ್ರೀ ಶಿವರುದ್ರ ಸ್ವಾಮಿಗಳು ಆಶೀರ್ವಚನ ನೀಡಿದರು. ಡಾ. ಶೈಲಜಾ ಬಸವರಾಜು ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ಉಪ ನಿರ್ದೇಶಕ ಶ್ರೀ ಮ.ಗು. ಸದಾನಂದಯ್ಯನವರು ಸ್ವಾಗತ ಮಾಡಿದರು.

ಪ್ರೊ. ದೇಜಗೌ ಉವಾಚ

* ನಮ್ಮ ಶಾಸಕರು ಇಂಗ್ಲಿಷ್ ಶಾಲೆಗಳಿಂದ ಹಣ ಪಡೆಯುತ್ತಿದ್ದಾರೆ. ಹಾಗಾಗಿ ಅವುಗಳ ಪರವಾಗಿ ಅವರು ಮಾತನಾಡುತ್ತಾರೆ. ಇಂಥ ಸಂದರ್ಭದಲ್ಲಿ ಮನುಷ್ಯನಿಗೆ ಸತ್ಯದತ್ತ ಬದ್ಧತೆ, ಸ್ವವಿಮರ್ಶೆ ಇವುಗಳು ಇರಬೇಕು. ಬಸವಣ್ಣನವರಲ್ಲಿ ಅಂಥ ಗುಣಗಳಿದ್ದುವು. ಹಾಗಾಗಿಯೇ ಅವರು ಇಂದಿಗೂ ದೊಡ್ಡವರಾಗಿದ್ದಾರೆ.

ಸಂಕಿರಣದಲ್ಲಿ ದೇಜಗೌ ನುಡಿ

* ವಚನ ಸಾಹಿತ್ಯದ ಮೌಲ್ಯಾತ್ಮಕ ಸತ್ಯದಿಂದ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನದ ಪ್ರಾಶಸ್ತ್ಯ ದೊರೆತಿದೆ. ಆದರೂ ಇಂದು ಪ್ರಾಥಮಿಕ ಶಾಲೆಗಳಲ್ಲಿ ಮಾತೃಭಾಷೆಯಾದ ಕನ್ನಡಕ್ಕೆ ಪ್ರಾಮುಖ್ಯತೆ ನೀಡದೆ ಇಂಗ್ಲಿಷ್ ಮಾಧ್ಯಮದ ಪ್ರಭಾವಕ್ಕೆ ಮೊರೆಹೋಗುತ್ತಿರುವುದು ವಿಪರ್ಯಾಸ. ಇದು ಅತ್ಯಂತ ನೋವಿನ ಸಂಗತಿ.

* ಮತ ಕಸಿಯುವ ಉದ್ದೇಶವನ್ನಿಟ್ಟುಕೊಂಡು ಇಂದು ಯಾವುದೇ ರಾಜಕೀಯ ವ್ಯಕ್ತಿಗಳು ಇಂಗ್ಲಿಷ್ ಮಾಧ್ಯಮದ ವಿರುದ್ಧ ದನಿಯೆತ್ತುತ್ತಿಲ್ಲ. ಇದು ಕನ್ನಡ ಭಾಷೆಯ ದುರದೃಷ್ಟ.

* ಸಮಾಜ ಸುಧಾರಣೆಯ ಘನ ಉದ್ದೇಶವನ್ನಿಟ್ಟು ಕೊಂಡು ರಚಿತವಾದ ವಚನ ಸಾಹಿತ್ಯ ಇಂದು ಸಂತೆಯ ಮಾರಾಟದ ವಸ್ತುವಾಗಿದೆ. ವೇಷಧಾರಿಗಳ ಕೈಗೆ ಸಿಕ್ಕಿರುವ ವಚನಸಾಹಿತ್ಯ ಶೋಷಣೆಗೆ ಒಳಗಾಗಿದೆ. ಸಂಶೋಧನೆಯ ಹೆಸರಿನಲ್ಲಿ ಕೃತಕವಾಗಿ ವಿಂಗಡಣೆಗೊಂಡು ತನ್ನ ನೈಜ ಸತ್ಯವನ್ನು ಕಳೆದುಕೊಳ್ಳುತ್ತಿದೆ. ಅದು ಕೇವಲ ಸಾಹಿತ್ಯವಾಗಿ ಉಳಿಯದೆ ಬದ್ಧತೆಯಾಗಿ ಬೆಳೆದಾಗ ಮಾತ್ರ ತನ್ನ ಮೂಲ ಕಲ್ಪನೆಗೆ ಜೀವ ತುಂಬಿದಂತಾಗುತ್ತದೆ.

* ನಾವೆಲ್ಲರೂ ಹಲವಾರು ಧರ್ಮಗ್ರಂಥಗಳನ್ನು ಓದುತ್ತೇವೆ. ಆದರೆ ಅದಕ್ಕೆ ಅನುಗುಣವಾಗಿ ನಡೆಯುವುದಿಲ್ಲ. ಯಾವುದೇ ಸಾಹಿತ್ಯದ ಮೌಲ್ಯ ಪುಂಡರ ಪ್ರಕರಣ ಅಲ್ಲ ಎಂಬುದನ್ನು ಸಮಾಜಕ್ಕೆ ಅರ್ಥೈಸಬೇಕಾಗಿದೆ. □

ನಂಜನಗೂಡು ತಾಲ್ಲೂಕು ಸುತ್ತೂರಿನ ಜೆಎಸ್‌ಎಸ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮೈಸೂರಿನ ಅನ್ನಪೂರ್ಣ ಚಾರಿಟಬಲ್ ಕಣ್ಣಿನ ಆಸ್ಪತ್ರೆ ಮತ್ತು ಅಂಧತ್ವ ನಿಯಂತ್ರ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಉಚಿತ ಕಣ್ಣಿನ ಪೊರೆ ತಪಾಸಣಾ ಶಿಬಿರದಲ್ಲಿ ಸುತ್ತೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ನಿಂಗಮ್ಮಣ್ಣಿ, ನೇತ್ರ ಪರೀಕ್ಷಕರಾದ ಸವಿತಾರವರು, ಶ್ರೀ ಜಿ. ಶಿವಯ್ಯ, ಡಾ. ಪಿ. ಸವಿತಾ ಮತ್ತು ಶ್ರೀ ಚಿಟ್ಟೆಗೌಡರನ್ನು ಕಾಣಬಹುದು

ಎಸ್‌ಜೆಸಿಇ ಚಟುವಟಿಕೆಗಳು

ಜೇಸಿಯಾನ ಹಬ್ಬ

ಸಂಸ್ಥೆಯ ಸಾಂಸ್ಕೃತಿಕ ಹಬ್ಬ 'ಜೇಸಿಯಾನ'ವನ್ನು ದಿನಾಂಕ 7.5.2009 ರಿಂದ 9.5.2009 ರವರೆಗೆ ಕಾಲೇಜಿನಲ್ಲಿ ಆಚರಿಸಲಾಯಿತು. ಎಂದಿನಂತೆ ಈ ವರ್ಷವೂ ಸಹ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ಹಾಗೂ ಮೈಸೂರು ಜನತೆಯನ್ನು ಆಕರ್ಷಿಸುವಲ್ಲಿ ಯಶಸ್ವಿಯಾದ ಜೇಸಿಯಾನದ ಪ್ರಾಯೋಜಕತ್ವವನ್ನು ವಿವಿಧ ಸಂಸ್ಥೆಗಳು ವಹಿಸಿಕೊಂಡಿದ್ದವು. ಸುಮಾರು 10,000 ಜನರು ಈ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಬಿ.ಜಿ. ಸಂಗಮೇಶ್ವರ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭವನ್ನು ಆಸ್ಕರ್ ಪ್ರಶಸ್ತಿ ವಿಜೇತ ಪ್ರಸಿದ್ಧ ಹಿನ್ನೆಲೆ ಗಾಯಕರಾದ ಶ್ರೀ ವಿಜಯಪ್ರಕಾಶ್‌ರವರು ಉದ್ಘಾಟಿಸಿದರು. ಕಾಲೇಜಿನ ವಿಶೇಷಾಧಿಕಾರಿಗಳಾದ ಡಾ. ಬಿ.ಎಸ್. ಬಸವರಾಜಯ್ಯನವರು ಮತ್ತು ಉಪಪ್ರಾಂಶುಪಾಲರು ಹಾಗೂ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ. ಸೈಯ್ಯದ್ ಶಕೀಬ್ ಉರ್ ರೆಹಮಾನ್ ಗೌರವ ಅತಿಥಿಗಳಾಗಿದ್ದರು. ವಿದ್ಯಾರ್ಥಿ ಕ್ಷೇಮಾಧಿಕಾರಿಗಳಾದ ಡಾ. ಎಸ್. ಹರಿಪ್ರಸಾದ್ ಹಾಗೂ ವಿದ್ಯಾರ್ಥಿ ಸಮಿತಿಯ ಸದಸ್ಯರ ನೇತೃತ್ವದಲ್ಲಿ ಸಮಾರಂಭ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಜ್ಯೋತಿಯನ್ನು ಬೆಳಗಿಸುವುದರೊಂದಿಗೆ ಉದ್ಘಾಟನೆಗೊಂಡ ಈ ಸಮಾರಂಭದಲ್ಲಿ ಕಾಲೇಜಿನ ವಾರ್ಷಿಕ ಸಂಚಿಕೆ "ಜೇಜಿನ್" (Jayzine) ಅನ್ನು ಡಾ. ಬಿ.ಎಸ್. ಬಸವರಾಜಯ್ಯನವರು ಬಿಡುಗಡೆ ಮಾಡಿದರು.

ಶ್ರೀ ವಿಜಯಪ್ರಕಾಶ್‌ರವರು ಜೈ ಹೋ, ಮುಕ್ತ ಮುಕ್ತ ಶೀರ್ಷಿಕೆಗೀತೆ ಮುಂತಾದ ಗೀತೆಗಳನ್ನು ಹಾಡಿ ಎಲ್ಲರ ಮನ ಗೆದ್ದರು. ವಿದ್ಯಾರ್ಥಿಗಳಿಂದ ಅನೇಕ ಮನೋರಂಜನಾ ಕಾರ್ಯಕ್ರಮಗಳು ನಡೆದವು. ವಿದ್ಯಾರ್ಥಿಗಳ ಒಂದು ತಂಡ ನಡೆಸಿಕೊಟ್ಟ 'ಡೊಳ್ಳು ಕುಣಿತ' ಎಲ್ಲಾ ಸಾಂಸ್ಕೃತಿಕ ಕಾರ್ಯಕ್ರಮಗಳಿಗಿಂತಲೂ ವಿಭಿನ್ನವಾಗಿತ್ತು. ಇದೇ ತಂಡವು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 10 ನೇ ವಾರ್ಷಿಕ ಯುವ ಜನೋತ್ಸವದಲ್ಲಿ ನಡೆದ ಜಾನಪದ ನೃತ್ಯ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿತ್ತು. ಇದೇ ಸಂದರ್ಭದಲ್ಲಿ ಕು. ಅನುಶಾರವರು 'ಬೆಲ್ಲಿ ಡ್ಯಾನ್ಸ್' ಮೂಲಕ ಅರಬ್ ಸಂಸ್ಕೃತಿಯ ಪರಿಚಯವನ್ನು ಮಾಡಿಕೊಟ್ಟರು.

ಜೇಸಿಯಾನದ ಪ್ರಯುಕ್ತ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಇದರಲ್ಲಿ ರಾಜ್ಯದ ವಿವಿಧ ವಿದ್ಯಾಸಂಸ್ಥೆಗಳಿಂದ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಡರ್ಟ್ ಅಂಟ್ ಟೈಮ್, ಸ್ಪೀಡ್ ಅಂಡ್ ಡಿಸ್ಟೆನ್ಸ್ ರ್‍ಯಾಲೀಸ್, ಮ್ಯಾರಥಾನ್ ಹಾಗೂ ಟ್ರೆಷರ್ ಹಂಟ್ ಸ್ಪರ್ಧೆಗಳಲ್ಲಿ ಅನೇಕ ವಿದ್ಯಾರ್ಥಿಗಳು ತುಂಬು ಉತ್ಸಾಹದಿಂದ ಪಾಲ್ಗೊಂಡಿದ್ದರು. ವಾಲಿಬಾಲ್, ಟೈಗರ್ 5 , ಫುಟ್‌ಬಾಲ್ ಮತ್ತು ಕ್ರಿಕೆಟ್ ಪಂದ್ಯಾವಳಿಗಳನ್ನು ಸಹ ಆಯೋಜಿಸಲಾಗಿತ್ತು. ಸಂಸ್ಥೆಯ ಸಿಬ್ಬಂದಿವರ್ಗದವರಿಗಾಗಿ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಿದ್ದು ಈ ಬಾರಿಯ ವಿಶೇಷವಾಗಿತ್ತು. ಸಾಹಿತ್ಯಿಕ ಸ್ಪರ್ಧೆಗಳಲ್ಲಿ ಕನ್ನಡ ಬರವಣಿಗೆ, ಕವನ ರಚನೆ, ಚರ್ಚಾಸ್ಪರ್ಧೆ, ಮೂಕಾಭಿನಯ, ರಸಪ್ರಶ್ನೆ ಮುಂತಾದ ಸ್ಪರ್ಧೆಗಳು ನಡೆದವು.

ಈ ಸಾಂಸ್ಕೃತಿಕ ಹಬ್ಬದ ಪ್ರಯುಕ್ತ 5.4.2009 ಮತ್ತು 6.4.2009 ರಲ್ಲಿ ನಡೆದ ಜೇಸಿಯಾನ ರೇಸ್ ರೋಮಾಂಚನವನ್ನು ಸೃಷ್ಟಿಸಿತ್ತು. ಈ ಸ್ಪರ್ಧೆಯಲ್ಲಿ ಸುಮಾರು 20 ಕಾರು ಹಾಗೂ 100 ಕ್ಕೂ ಹೆಚ್ಚು ದ್ವಿಚಕ್ರವಾಹನ ಸವಾರರು ಭಾಗವಹಿಸಿದ್ದರು. ವಾಹನಗಳ ಅಬ್ಬರದ ನಡುವೆ ಧೂಳೆಬ್ಬಿಸಿ ಸವಾರರು ಮುಂದೆ ಸಾಗುತ್ತಿದ್ದಂತೆಯೇ ಪ್ರೇಕ್ಷಕರ ಉದ್ಗಾರ ಮುಗಿಲು ಮುಟ್ಟುವಂತಿತ್ತು. ವಿವಿಧ ವಿಭಾಗಗಳಲ್ಲಿ ಮೂರು ಸ್ಥಾನ ಪಡೆದವರಿಗೆ ಕ್ರಮವಾಗಿ ಐದು ಸಾವಿರ, ಮೂರು ಸಾವಿರ ಹಾಗೂ ಎರಡು ಸಾವಿರ ರೂ.ಗಳ ಬಹುಮಾನ ನೀಡಲಾಯಿತು.

□

ಜೆಎಸ್‌ಎಸ್ ಕಾಲೇಜು, ನಂಜನಗೂಡು

ಕನ್ನಡ ವಿಭಾಗ

ಕಾಲೇಜಿನ ಕನ್ನಡ ವಿಭಾಗವು ದಿನಾಂಕ 22.5.2009 ರಂದು ಏರ್ಪಡಿಸಿದ್ದ 'ಪ್ರಶಸ್ತಿ ಪುರಸ್ಕೃತ ಕೃತಿಗಳ ದತ್ತಿ ಉಪನ್ಯಾಸ ಮಾಲಿಕೆ'ಯಲ್ಲಿ ಪ್ರೊ. ಮೊರಬದ ಮಲ್ಲಿಕಾರ್ಜುನರವರು, ಶ್ರೀ ಶ್ರೀನಿವಾಸ ವೈದ್ಯರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೃತಿ 'ಹಳ್ಳ ಬಂತು ಹಳ್ಳ'ವನ್ನು ಕುರಿತು ಉಪನ್ಯಾಸ ನೀಡಿದರು. ಉಪ ಪ್ರಾಚಾರ್ಯರಾದ ಪ್ರೊ. ಸಿ.ವಿ. ಬಸವರಾಜು ಹಾಗೂ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ. ಸಿ. ಸರೋಜಮ್ಮಣ್ಣಿಯವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಪ್ರೊ. ಮೊರಬದರವರು "ಇದೊಂದು ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯುಳ್ಳ ಸಿಪಾಯಿ ದಂಗೆಯ ಸಂದರ್ಭದ ಸಾಮಾಜಿಕ, ರಾಜಕೀಯ ಪರಿಸ್ಥಿತಿಯ ಒಳನೋಟದ ಹರಹುಗಳುಳ್ಳ ಕಾದಂಬರಿ ಎಂದರು. 1850-1945ರ ಅವಧಿಯ ಭಾರತೀಯ ಸಮಾಜದ ಚಿತ್ರಣ, ಯುದ್ಧದ ಪರಿಣಾಮಗಳು, ಒಬ್ಬ ವ್ಯಕ್ತಿ ಉದಾರವಾಗಿ ಬೆಳೆದಾಗ ಸಮಾಜದ ಜೀವಶಕ್ತಿಯಾಗುವ ಸೊಗಡಿನ ಚಿತ್ರಣ, ಸಮಾಜದ ಸಹಜ ಸ್ಥಿತಿಯ ಅರಿವಿದ್ದಾಗ ಅರಳುವ ಮಾನವೀಯತೆ, ಪಾತ್ರಗಳ ಪರಿಸರ ಸ್ಪಂದನ ಚಿತ್ರಣ ಪರಿಣಾಮಕಾರಿಯಾಗಿದೆ. ಸ್ವಾತಂತ್ರ್ಯ ಹೋರಾಟದ ಜೊತೆ ಜೊತೆಯಲ್ಲೇ ಗ್ರಾಮೀಣ ಸಮುದಾಯದ ಬದಲಾದ ಸಾಂಪ್ರದಾಯಿಕ ಬದುಕಿನ ಪ್ರತಿಕ್ರಿಯೆಯು ರೂಪಗೊಂಡ ದ್ಯೋತಕವಾಗಿ ಹಳ್ಳದ, ಪ್ರವಾಹದ ರೂಪಕ ಇಲ್ಲಿದೆ. ಮಾನವೀಯ ಔದಾರ್ಯ, ಸಕಾರಾತ್ಮಕ ಹೋರಾಟ ಜಾತಿಭೇದ ರಹಿತ ಸಮಾಜ ದರ್ಶನ ಓದುಗನನ್ನು ಕೆರಳಿಸದೆ ಪ್ರಗತಿಪರ ಚಿಂತಕನನ್ನಾಗಿಸುವ ಸನ್ನಿವೇಶಗಳ ದರ್ಶನ ಕಾದಂಬರಿಯಲ್ಲಿದೆ. ಒಂದು ಸ್ತರದಿಂದ ಮತ್ತೊಂದು ಸ್ತರಕ್ಕೆ ಹೋಗುವುದಕ್ಕೆ ಅಡ್ಡಿಯಾಗಿದ್ದ ಹಳ್ಳ ಸ್ವಾತಂತ್ರ್ಯಾನಂತರ ಅದನ್ನು ದಾಟಿಹೋಗುವ ಅವಕಾಶವನ್ನು ಪ್ರತಿಬಿಂಬಿಸುತ್ತದೆ. ಹಿರಿಯರ ಸಮಾಜ ಇಂತಹ ಅಡೆತಡೆಗಳನ್ನು ಮಾನವೀಯ ಸೇತುವೆಯ ನೆರವಿನಿಂದ ದಾಟುತ್ತಿದ್ದರು. ವಾಸುದೇವಾಚಾರ್ಯ ಸ್ವಾಮಿಗಳು, ತುಳಸಕ್ಕನಂತವರು ಕಟ್ಟಿಕೊಟ್ಟ ಇಂತಹ ಸೇತುವೆಗಳಲ್ಲಿ ಸಿಡಿಮಿಡಿ, ತಿರಸ್ಕಾರಗಳಿಲ್ಲ. ಹಳ್ಳದ ಅಪಾಯದಿಂದ ಪಾರು ಮಾಡುವ ಇಂತಹ ಸೇತುವೆಯ ಪ್ರಯೋಜನವನ್ನು ಓದುಗ ಪಡೆಯುವುದು ಕೃತಿಯ ಮುಖ್ಯ ಆಶಯವಾಗಿದೆ" ಎಂದು ಬಣ್ಣಿಸಿದರು. ಸಮಾರಂಭವನ್ನು ಕುರಿತು, ಇದೊಂದು ಮಾದರಿ ಕಾರ್ಯಕ್ರಮ; ಪ್ರಶಸ್ತಿ ವಿಜೇತ ಕೃತಿಯನ್ನು ನೆನೆಸಿಕೊಳ್ಳುವ, ವಿಶ್ಲೇಷಿಸುವ ಪ್ರೇರಣೆ, ಅವಕಾಶ ನೀಡಿದ ವಿಶಿಷ್ಟ ಕಾರ್ಯಕ್ರಮವೆಂದು ಶ್ಲಾಘಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉಪ ಪ್ರಾಚಾರ್ಯರಾದ ಪ್ರೊ. ಸಿ.ವಿ. ಬಸವರಾಜುರವರು, ಅತಿಥಿಗಳನ್ನು ಸಭೆಗೆ ಪರಿಚಯಿಸಿದ ಪ್ರೊ. ಎಂ. ಸಿ. ಸರೋಜಮ್ಮಣ್ಣಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಸುಪ್ರಿಯಾ ಪ್ರಾರ್ಥಿಸಿದರು, ಗಿರೀಶ್‌ಕುಮಾರ್ ಸ್ವಾಗತಿಸಿದರು, ರವಿಶಂಕರ್ ವಂದಿಸಿದರು ಹಾಗೂ ಶಿವಕುಮಾರ್ ನಿರೂಪಿಸಿದರು.

ಅರ್ಥಶಾಸ್ತ್ರ ವಿಭಾಗ

ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಪ್ರೊ. ಕೆ.ಎಸ್. ರಾಜಶೇಖರ್‌ರವರು ಲಿಸ್ಬನ್ನಿನ ಲೂಸಿಯಾಡ ವಿಶ್ವವಿದ್ಯಾನಿಲಯ ಹಾಗೂ ಪೋರ್ಚುಗೀಸ್ ಅಸೋಸಿಯೇಷನ್ ಫಾರ್ ಟೂರಿಸಂ ರಿಸರ್ಚ್ ಅಂಡ್ ಡೆವಲಪ್‌ಮೆಂಟ್(APID) ಸಂಸ್ಥೆಯು ದಿನಾಂಕ 23 ಹಾಗೂ 24 ಏಪ್ರಿಲ್ 2009 ರಲ್ಲಿ ಸಂಯೋಜಿಸಿದ್ದ "ಅಡ್ವಾನ್ಸಸ್ ಆನ್ ಟೂರಿಸಂ ಇಕನಾಮಿಕ್ಸ್" ಶೀರ್ಷಿಕೆಯ ಅಂತಾರಾಷ್ಟ್ರೀಯ ವಿಚಾರಸಂಕಿರಣದಲ್ಲಿ 'ಟೂರಿಸಂ ಪಾಲಿಸಿ ಅಂಡ್ ಡೆವಲಪ್‌ಮೆಂಟ್ ಇನ್ ಇಂಡಿಯ' ಎಂಬ ವಿಷಯವಾಗಿ

ಉಪನ್ಯಾಸ ನೀಡಿದರು. ಇಷ್ಟೇ ಅಲ್ಲದೆ, ಸೌದಿ ಅರೇಬಿಯಾ ದೇಶದ ಕಿಂಗ್ ಸೌದಿ ವಿಶ್ವವಿದ್ಯಾಲಯದ ಕಿಂಗ್ ಅಬ್ದುಲ್ಲ ಇನ್ಸ್ಟಿಟ್ಯೂಟ್ ಆಫ್ ನ್ಯಾನೊ ಟೆಕ್ನಾಲಜಿಯು ಏಪ್ರಿಲ್ 5-7 ರವರೆಗೆ ಆಯೋಜಿಸಿದ್ದ "ನ್ಯಾನೊಟೆಕ್ನಾಲಜಿ ಇಂಡಸ್ಟ್ರೀಸ್, ದಿ ಲೀಡಿಂಗ್ ಟೆಕ್ನಾಲಜಿ ಆಫ್ ಟ್ವೆಂಟಿಫಸ್ಟ್ ಸೆಂಚುರಿ" ಎಂಬ ಅಂತಾರಾಷ್ಟ್ರೀಯ ವಿಚಾರಸಂಕಿರಣದಲ್ಲಿ "ನ್ಯಾನೊಟೆಕ್ನಾಲಜಿ. ಆ್ಯನ್ ಇಂಜಿನ್ ಆಫ್ ಎಕನಾಮಿಕ್ ಗ್ರೋತ್" ಎಂಬ ಲೇಖನವನ್ನು ಮಂಡಿಸಿದ್ದರು. ಅಲ್ಲಿನ ಅನುಭವಗಳನ್ನು ದಿನಾಂಕ 16.5.2009 ರಂದು ಕಾಲೇಜಿನ ವತಿಯಿಂದ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಸಹೋದ್ಯೋಗಿ ಮಿತ್ರರೊಂದಿಗೆ ಹಂಚಿಕೊಂಡರು.

ರಸಾಯನಶಾಸ್ತ್ರ ವಿಭಾಗ

ರಸಾಯನಶಾಸ್ತ್ರ ವಿಭಾಗದ ವತಿಯಿಂದ ದಿನಾಂಕ 14.5.2009 ರಂದು ಮೈಸೂರಿನ ಶಾರದಾವಿಲಾಸ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ. ಗೋವಿಂದರಾಜ್‌ರವರು "ಪ್ರಿನ್ಸಿಪಲ್ಸ್ ಆಫ್ ಕ್ಯಾಲೊರಿಮೆಟ್ರಿಕ್ ಎಸ್ಟಿಮೇಷನ್ಸ್" ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು. ಉಪನ್ಯಾಸವು ವಿಷಯ ಪರಿಪ್ಲುತವಾಗಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರುಗಳಿಗೆ ಉಪಯುಕ್ತವಾಗುವಂತಿತ್ತು. ವಿಜ್ಞಾನ ವಿದ್ಯಾರ್ಥಿಗಳು ತಾಮ್ರ ಮತ್ತು ಕಬ್ಬಿಣದ ದ್ರಾವಣಗಳಲ್ಲಿ ಇಂಥ ಎಸ್ಟಿಮೇಷನ್‌ಗಳನ್ನು ಮಾಡುವ ಬಗೆಗೆ ಹೆಚ್ಚಿನ ಮಾಹಿತಿ ಪಡೆದರು. ಪ್ರಾಚಾರ್ಯರಾದ ಪ್ರೊ. ಎಸ್. ರತ್ನಶೇಖರ್ ಅಧ್ಯಕ್ಷತೆ ವಹಿಸಿದ್ದರು. ವಿಭಾಗದ ಮುಖ್ಯಸ್ಥರಾದ ಪ್ರೊ. ಎ.ವಿ. ಚಂದ್ರಪ್ಪನವರು ಅತಿಥಿಗಳನ್ನು ಪರಿಚಯಿಸಿದರು. ಶ್ರೀಮತಿ ವೀಣಾರವರು ವಂದಿಸಿದರು.

ಜೆಎಸ್‌ಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ, ಮೈಸೂರು

ದಿನಾಂಕ 5.6.2009 ರಂದು ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ನಡೆಯಿತು. ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಾದ ಕು. ನಿಶ್ಚಿತ ಹಾಗೂ ಕು. ಸಹನರವರ ಪ್ರಾರ್ಥನೆಯಿಂದ ಪ್ರಾರಂಭವಾಯಿತು. ವಿದ್ಯಾರ್ಥಿ ಶ್ರೀ ಕೀರ್ತಿನಂದನ್‌ರವರು ಸ್ವಾಗತ ಕೋರಿದರು.

ವಿದ್ಯಾರ್ಥಿಗಳಾದ ಕು. ಪ್ರತಿಮಾ ಮತ್ತು ಕು. ಅಪೂರ್ವರವರು ವಿಶ್ವ ಪರಿಸರ ದಿನಾಚರಣೆಯ ಮಹತ್ವದ ಬಗ್ಗೆ ಮಾತನಾಡಿದರು.

ಮೈಸೂರು 'ಅಮೆಚೂರ್ ನ್ಯಾಚುರಲಿಸ್ಟ್‌ನ ಸ್ಥಾಪಕರು ಹಾಗೂ ಕಾರ್ಯದರ್ಶಿಗಳಾದ ಶ್ರೀ ಕೆ. ಮನು ಅವರು ಮುಖ್ಯ ಅತಿಥಿಗಳಾಗಿದ್ದರು. ಅವರು ಈ ಕಾರ್ಯಕ್ರಮದ ತಮ್ಮ ಭಾಷಣದಲ್ಲಿ "ಪರಿಸರ ವಿಜ್ಞಾನ ಎಂಬುದು ನಾಲ್ಕು ಗೋಡೆಗಳ ಮಧ್ಯೆ ವ್ಯಾಸಂಗ ಮಾಡುವಂತಹದ್ದಲ್ಲ. ಇದು ಹೊರಗಡೆ ಓಡಾಡಿ ಕಲಿಯುವಂತಹ ಸಾಮಾನ್ಯ ಜ್ಞಾನ. ಪ್ರಕೃತಿಯಲ್ಲಿರುವ ಪ್ರತಿಯೊಂದು ವಸ್ತುವೂ ಇಂಗಾಲದಿಂದ ಸೃಷ್ಟಿಯಾಗಿದೆ. ಸಸ್ಯಗಳು ತಾವು ಇಂಗಾಲವನ್ನು ಉಪಯೋಗಿಸಿಕೊಂಡು ಜನರಿಗೆ ಆಮ್ಲಜನಕವನ್ನು ಒದಗಿಸುತ್ತವೆ. ಪರಿಸರ ವಿಜ್ಞಾನ ಹಾಗೂ ಅರ್ಥಶಾಸ್ತ್ರಗಳಿಗೆ ಪರಸ್ಪರ ಸಂಬಂಧ ಇದೆ. ಪೆಟ್ರೋಲ್ ಹಾಗೂ ಚಿನ್ನ ಇವು ಮುಗಿದು ಹೋಗುವ ಸಂಪನ್ಮೂಲಗಳಾದ್ದರಿಂದ ಮುಂದುವರೆದ ರಾಷ್ಟ್ರಗಳು ಪರಿಸರದ ಮಾರಾಟದಲ್ಲಿ ತೊಡಗಿವೆ. ಆದ್ದರಿಂದ ನಾವು ಪರಿಸರದ ಬಗ್ಗೆ ಸೂಕ್ತ ಕಾಳಜಿ ವಹಿಸಬೇಕು" ಎಂದು ಕರೆ ನೀಡಿದರು. ಶಾಲೆಯ ಮುಖ್ಯ ಶಿಕ್ಷಕರಾದ ಶ್ರೀ ಆರ್. ಚನ್ನಬಸಪ್ಪನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅಣು ಸ್ಥಾವರಗಳ ಮೂಲಕ ವಿದ್ಯುತ್ತನ್ನು ಉತ್ಪಾದಿಸಿದರೆ ಪರಿಸರಮಾಲಿನ್ಯ ಉಂಟಾಗುತ್ತದೆ. ಇದನ್ನು ಸರ್ಕಾರ ಮತ್ತು ಸಾರ್ವಜನಿಕರು ಅರಿಯಬೇಕು. ಪರಿಸರ ಚೆನ್ನಾಗಿದ್ದರೆ ಮನುಕುಲ ಚೆನ್ನಾಗಿರುತ್ತದೆ" ಎಂದರು.

ವಿದ್ಯಾರ್ಥಿನಿ ಕು. ಹೀನಾ ಕೌಸರ್ ವಂದನಾರ್ಪಣೆ ಮಾಡಿದರು. ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು. ಕಾರ್ಯಕ್ರಮದಲ್ಲಿ ಎಲ್ಲ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರು ಪಾಲ್ಗೊಂಡಿದ್ದರು.

JSS PUBLIC SCHOOL. OOTY

Sri. Gautam D. Shah of the School topped the Nilgiris District in the Class X CBSE examinations (2009), results of which were announced recently. He secured 484 marks out 500. Pointing out that the toper had lived up to the expectations of all those connected with him, Mr. Mendonce, Principal of the School, told the media that the student was also good in many co-curricular activities.

ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ

"ಭಾರತೀಯತೆ ಎನ್ನುವುದು ಬಹುಮುಖಿ ಸಂಸ್ಕೃತಿಗಳಿಂದ ಕೂಡಿ ಒಂದು ಬಗೆಯ ಅಖಂಡತ್ವವನ್ನು ಪಡೆದುಕೊಂಡಿದೆ" ಎಂದು ಪ್ರೊ. ಲಿಂಗದೇವರು ಹಳೆಮನೆಯವರು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ದಿನಾಂಕ 3.6.2009 ರಂದು ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಪೂರಕವಾಗುವ "ಭಾರತೀಯ ಭಾಷೆಗಳು ಮತ್ತು ಸಾಹಿತ್ಯ" ಎಂಬ ವಿಷಯದ ಬಗೆಗೆ ಅವರು ಮಾತನಾಡಿದರು. "ಒಂದು ದೀಪಸ್ತಂಭದಲ್ಲಿ ಬೇರೆ ಬೇರೆ ಬತ್ತಿಗಳಿಂದ ಬೆಳಕು ನೀಡುವ ಜ್ಯೋತಿಯಂತೆ ಭಾರತದಲ್ಲಿ ಹಲವಾರು ಭಾಷೆಗಳಿವೆ. 1960-70 ರ ದಶಕದಲ್ಲಿ ಭಾರತೀಯ ಭಾಷೆಗಳ ಕುರಿತು ಚರ್ಚೆಯ ಆರಂಭದಲ್ಲಿ ಅವುಗಳು ಏಕರೂಪಿಯೆ, ಬಹುರೂಪಿಯೆ ಎಂಬ ಪ್ರಶ್ನೆಗಳು ಉಂಟಾದವು. ಭಾರತದಲ್ಲಿ ಭಾಷೆಗಳ ಅಧ್ಯಯನವನ್ನು ಆರಂಭಿಸಿದವರು ಬ್ರಿಟಿಷರೆ. ಅವರು ತಮ್ಮದೇ ಆದ ಸ್ಥಾಪಿತ ಸಾಂಸ್ಕೃತಿಕ ಆಸಕ್ತಿಗಳನ್ನಿಟ್ಟುಕೊಂಡಿದ್ದರು. ಭಾರತದಲ್ಲಿ ಒಟ್ಟು ನಾಲ್ಕು ಭಾಷಾ ಕುಟುಂಬಗಳಿವೆ. ಅವುಗಳಡಿಯಲ್ಲಿ ಸುಮಾರು 250 ಭಾಷೆಗಳನ್ನು ಗುರುತಿಸಿದರು. ಅವುಗಳಲ್ಲಿ ಕೆಲವು ಲಿಪಿಮೂಲವಾಗಿ ಹಾಗೂ ವಾಙ್ಮಲವಾಗಿ ಈಗಲೂ ಉಳಿದುಕೊಂಡು ಬಂದಿವೆ" ಎಂದರು.

ಈ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಡಿ. ಪುಷ್ಪಾವತಿಯವರು, ಉಪನ್ಯಾಸಕರಾದ ಡಾ. ಮಹೇಶ್ವರಿ, ಶ್ರೀಮತಿ ಜಯಶೀಲ, ಶ್ರೀಮತಿ ಅಂಬಿಕಾದೇವಿ, ಶ್ರೀಮತಿ ಮಹಾದೇವಮ್ಮ, ಶ್ರೀಮತಿ ರಶ್ಮಿ, ಶ್ರೀ ವರಪ್ರಸಾದ್ ಮುಂತಾದವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಆರಂಭದಲ್ಲಿ ವಿದ್ಯಾರ್ಥಿ ಶಿವಕುಮಾರ್‌ರವರಿಂದ ಪ್ರಾರ್ಥನೆ, ಅಧ್ಯಾಪಕ ಡಾ. ರಾಜಶೇಖರ ಜಮದಂಡಿಯವರಿಂದ ಸ್ವಾಗತ ನಡೆಯಿತು. ಚಂದ್ರಶೇಖರ್‌ರವರು ಕಾರ್ಯಕ್ರಮದ ನಿರೂಪಣೆ ಮಾಡಿದರು.

***

"ಕ್ರಿ. ಪೂ. ದಲ್ಲಿ ರಚನೆಗೊಂಡ ಹೋಮರನ ಇಲಿಯಿಡ್, ಒಡಿಸ್ಸಿ ಮತ್ತು ವರ್ಜಿಲ್‌ನ ಈನಿಯಡ್ ಮಹಾಕಾವ್ಯಗಳು ಜಗತ್ತಿನಾದ್ಯಂತ ಅನೇಕ ಭಾಷೆಗಳಲ್ಲಿ ಇನ್ನೂ ಜೀವಂತವಾಗಿವೆ. ಇವುಗಳ ಪ್ರಭಾವವನ್ನು ಇತರೇ ಸಾಹಿತ್ತಿಕ ಪ್ರಕಾರಗಳಲ್ಲಿ ಕಾಣಬಹುದಾಗಿದೆ" ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ. ಸಿ. ನಾಗಣ್ಣನವರು ನುಡಿದರು.

ಅವರು ದಿನಾಂಕ 9.6.2009 ರಂದು ಚಾಮರಾಜನಗರದಲ್ಲಿರುವ ಜೆಎಸ್‌ಎಸ್ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ "ಮಹಾಕಾವ್ಯಗಳ ತೌಲನಿಕ ಅಧ್ಯಯನ" ಎಂಬ ವಿಷಯವಾಗಿ ವಿಶೇಷ ಉಪನ್ಯಾಸ ನೀಡಿದರು. ಗ್ರೀಕ್ ಮತ್ತು ರೋಮ್ ದೇಶಗಳಲ್ಲಿ ರಚನೆಗೊಂಡ ಈ ಮಹಾಕಾವ್ಯಗಳಲ್ಲಿ ಆವೇಶ, ಉತ್ಕಟತೆ, ಸೇಡು, ಸಾಹಸ, ಯುದ್ಧ, ಪರ್ಯಟನೆ, ಪ್ರೀತಿ-ದ್ವೇಷ ಮುಂತಾದ ಮನುಷ್ಯನ ಗುಣಾವಗುಣಗಳು ಪ್ರತಿಬಿಂಬಿತವಾಗಿವೆ. ಮನುಷ್ಯನ ಮನೋಭಾವಕ್ಕನುಗುಣವಾಗಿ ರಚನೆಗೊಂಡಿರ ಬಹುದಾದ ಈ ಮಹಾಕಾವ್ಯಗಳಲ್ಲಿ ಸೂಕ್ಷ್ಮ ವಿಷಯಗಳು, ವರ್ಣನೆಗಳು ಹೇಗೆ ಪ್ರತಿಕ್ರಿಯೆ ಹಾಗೂ ಪ್ರತೀಕಾರವಾಗಿ ಮೂಡಿಬಂದಿವೆ ಎಂಬುದನ್ನು ಕಾಣಬಹುದು ಎಂದು ಅವರು ಹೇಳಿದರು. ಮೌಖಿಕವಾಗಿ ಹರಿದು ಬಂದ ಈ ಕಥೆಗಳನ್ನು ಮಹಾಕಾವ್ಯದ ರೂಪದಲ್ಲಿ ಕಟ್ಟಿಕೊಟ್ಟ ಆ ಮಹಾಕವಿಗಳ ಪರಿಚಯ ಮತ್ತು ಕಾವ್ಯದ ಒಳನೋಟಗಳನ್ನು ವಿಸ್ತಾರವಾಗಿ ಪರಿಚಯಿಸುತ್ತಾ ಸಾಹಿತ್ಯದ ವಿದ್ಯಾರ್ಥಿಗಳು ಅಧ್ಯಯನ ಮಾಡಬೇಕೆಂದು ಕರೆನೀಡಿದರು.

ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಡಿ. ಪುಷ್ಪಾವತಿ, ಉಪನ್ಯಾಸಕರಾದ ಡಾ. ಎನ್. ಮಹೇಶ್ವರಿ, ಶ್ರೀಮತಿ ಮಹಾದೇವಮ್ಮ ಮುಂತಾದವರು ಉಪಸ್ಥಿತರಿದ್ದರು. ಆರಂಭದಲ್ಲಿ ಅಧ್ಯಾಪಕರಾದ ಡಾ. ರಾಜಶೇಖರ ಜಮದಂಡಿಯವರಿಂದ ಸ್ವಾಗತ, ಶ್ರೀ ಹು.ಗ. ಚಂದ್ರಶೇಖರರವರಿಂದ ನಿರೂಪಣೆ ಹಾಗೂ ಶ್ರೀ ನಟರಾಜ್ ಅವರಿಂದ ವಂದನಾರ್ಪಣೆ ನೆರವೇರಿತು.

□

ಸುತ್ತೂರಿನಲ್ಲಿ ಸಾರ್ವಜನಿಕರ ಶಿಬಿರ

"ಮಾನವ ಅಹಮಿಕೆಯ ದ್ವೀಪದಂತಾಗದೆ, ಮಾನವೀಯತೆಯನ್ನು ಬೆಳೆಸಿಕೊಂಡು ತನ್ನ ಸುತ್ತಲೂ ಬೆಳಕು ಚೆಲ್ಲುವ ದೀಪದಂತಾಗಬೇಕು. ಮಕ್ಕಳಲ್ಲಿ ಆದರ್ಶಗಳನ್ನು ತುಂಬಬೇಕಾದ ಮನೆ, ಶಾಲೆ ಮತ್ತು ಸಮಾಜ ಇಂದು ಅದನ್ನು ಮಾಡುತ್ತಿಲ್ಲ. ಎಲ್ಲೆಡೆ ಮೌಲ್ಯಗಳ ಅಧಃಪತನವಾಗುತ್ತಿದೆ" ಎಂದು ಕರ್ನಾಟಕ ಸರ್ಕಾರದ ಕೃಷಿ ಇಲಾಖೆ ಆಯುಕ್ತರಾದ ಡಾ. ಸಿ. ಸೋಮಶೇಖರ್ ರವರು ವಿಷಾದಿಸಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಸಾರ್ವಜನಿಕರಿಗಾಗಿ ಸುತ್ತೂರಿನಲ್ಲಿ ಏರ್ಪಡಿಸಿದ್ದ ಐದು ದಿನಗಳ ವ್ಯಕ್ತಿತ್ವ ವಿಕಸನ ಶಿಬಿರದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದ ಅವರು, "ವ್ಯಕ್ತಿಯು ತನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಬೇಕು. ಜೀವನದಲ್ಲಿ ತಾತ್ವಿಕ ಚಿಂತನೆಗಳನ್ನು ಅಳವಡಿಸಿಕೊಂಡಾಗ ಅವು ವ್ಯಕ್ತಿಯ ಬದುಕನ್ನು ಮುನ್ನಡೆಸುತ್ತವೆ. ಶಿಕ್ಷಣ ವ್ಯಕ್ತಿಯ ವ್ಯಕ್ತಿತ್ವವನ್ನು ಸಮಗ್ರವಾಗಿ ರೂಪಿಸಬೇಕಿದೆ. ಆತ್ಮಸ್ಥೈರ್ಯ, ಸ್ಥಿತಪ್ರಜ್ಞತೆಗಳನ್ನು ಬೆಳೆಸುವ ಆಶಯ ಶಿಕ್ಷಣದ್ದಾಗಬೇಕು" ಎಂದು ನುಡಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಮಾರಂಭವನ್ನು ಉದ್ಘಾಟಿಸಿದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ.ಎಂ. ಶಿವಕುಮಾರ್‌ರವರು ಮಾತನಾಡಿ, ದೇಶದ ಅಭ್ಯುದಯವಾಗ ಬೇಕಾದರೆ ಮಾನವ ಸಂಪನ್ಮೂಲದ ಅಭಿವೃದ್ಧಿಯಾಗಬೇಕು. ಜನಸಂಖ್ಯಾ ಸ್ಫೋಟವನ್ನು ದೇಶದ ಪ್ರಗತಿಗೆ ಮಾರಕವಾಗದಂತೆ ಪೂರಕ ಅಂಶವನ್ನಾಗಿ ಬಳಸಿಕೊಂಡರೆ ನಾವು ವಿಶ್ವವನ್ನೇ ಗೆಲ್ಲಬಹುದೆಂಬ ವಿಶ್ವಾಸ ಇತ್ತೀಚೆಗೆ ಮೂಡುತ್ತಿದೆ. ಮಾನವ ಸಂಪನ್ಮೂಲದ ಪ್ರಗತಿಗೆ ಸರ್ಕಾರೇತರ ಸಂಸ್ಥೆಗಳು ಕಾರಣವಾಗಿದ್ದು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿರುವ ಜೆಎಸ್‌ಎಸ್ ಸಂಸ್ಥೆಯು ಮಹತ್ವದ ಕೊಡುಗೆ ನೀಡುತ್ತಿದೆ ಎಂದರು.

ಸಮಾರಂಭದ ಸಮ್ಮುಖ ವಹಿಸಿದ್ದ ವಿಜಾಪುರದ ಶ್ರೀ

ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ತಮ್ಮ ಪ್ರವಚನದಲ್ಲಿ ವಿವಿಧ ವೃತ್ತಿಯಲ್ಲಿರುವ ಪ್ರತಿಯೊಬ್ಬರೂ ತಮ್ಮದೇ ವೃತ್ತಿಯನ್ನು ಮಾಡುತ್ತಾ ಹಾಡಿಕೊಳ್ಳುತ್ತಿರಬೇಕು ಎಂದು ಹೇಳಿದರು. ಅಮೆರಿಕಾದ ಕವಿಯೊಬ್ಬನ ಮಾತುಗಳನ್ನು ಉದಾಹರಿಸಿ,

ಸಮಾರಂಭದ ಸಮ್ಮುಖ ವಹಿಸಿದ್ದ ವಿಜಾಪುರದ ಶ್ರೀ

ನಡೆಯುವ ಚರ್ಚೆಗಳ ಮೂಲಕ ಪಡೆಯುವ ಮಾನವೀಯ ಹಾಗೂ ಸಾಮಾಜಿಕ ಮೌಲ್ಯಗಳ ಅರಿವಿನಿಂದ ವ್ಯಕ್ತಿತ್ವ ವಿಕಸನ ಮಾಡಿಕೊಳ್ಳಲು ಸಾಧ್ಯ. ಆದ್ದರಿಂದ ಎಲ್ಲರೂ ವೈಚಾರಿಕತೆಯುಳ್ಳವರಾಗಬೇಕು ಹಾಗೂ ಪ್ರಾಮಾಣಿಕ ಜವಾಬ್ದಾರಿ ಹೊಂದಿದವರಾಗಬೇಕೆಂದು ತಿಳಿಸಿ, ದಿವಂಗತ ನೆಹರೂರವರ ಜೀವನದ ಕೆಲವು ಉದಾಹರಣೆಗಳನ್ನು ಪ್ರಸ್ತಾಪಿಸಿದರು.

ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿಯವರಾದ ಡಾ. ಬಿ. ಸುರೇಶ್‌ರವರು ಮಾತನಾಡಿ ಶಿಬಿರಾರ್ಥಿಗಳು ತುಂಬ ನಿರೀಕ್ಷೆಯನ್ನು ಇಟ್ಟುಕೊಂಡು ಬಂದಿದ್ದು, ಶಿಬಿರದ ಸಂಪೂರ್ಣ ಉಪಯೋಗವನ್ನು ಪಡೆದುಕೊಳ್ಳಬೇಕೆಂದು ಸಲಹೆ ನೀಡಿದರು. ಸಮಾರಂಭದಲ್ಲಿ ಉಪಸ್ಥಿತರಿದ್ದ ಜೈನ ಮುನಿಗಳಾದ ಡಾ. ಪದ್ಮಚಂದ್ರಾಜಿ ಮುನಿಯವರು ಹಾಗೂ ಶ್ರೀ ಜೈ ಧುರಂಧರ್ ಮುನೀಜಿ ಮರಸರವರು ಮಾತನಾಡಿ "ಧರ್ಮವು ಎಲ್ಲಾ ಜನಾಂಗಗಳಿಗೂ ಒಂದೇ ಆಗಿರುತ್ತದೆ. ಆಧ್ಯಾತ್ಮಿಕ ಶಕ್ತಿಯಿಂದ ಆತ್ಮಕಲ್ಯಾಣ ಸಾಧ್ಯ ಎಂಬುದನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ತೋರಿಸಿಕೊಟ್ಟಿದ್ದಾರೆ" ಎಂದು ನುಡಿದರು. ಈ ಹಿಂದೆ 15 ದಿನಗಳ ಕಾಲ ತಮ್ಮ ವಿದ್ಯಾರ್ಥಿಗಳಿಗಾಗಿ ಸಂಸ್ಕಾರ ಶಿಬಿರ ನಡೆಸಲು ಅವಕಾಶ ಮಾಡಿಕೊಟ್ಟಿದ್ದನ್ನು ಸ್ಮರಿಸಿ ಅದಕ್ಕಾಗಿ ತಮ್ಮ ಕೃತಜ್ಞತೆಯನ್ನು ಸಲ್ಲಿಸಿದರು.

ಶ್ರೀ ಲುಕೋಸ್ ವಲ್ಲತ್ತರೈರವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ವ್ಯಕ್ತಿತ್ವ ವಿಕಸನವನ್ನು ಎರಡು ರೀತಿಯಲ್ಲಿ ಕೈಗೊಳ್ಳಲು ಸಾಧ್ಯ. ಒಂದು, ಆಧ್ಯಾತ್ಮಿಕ ಶಿಬಿರದ ಮೂಲಕ; ಹಾಗೂ, ಎರಡನೆಯದು ಸ್ವಯಂಸಾಧನೆಯ ಮೂಲಕ, ಅಂದರೆ ಪುಸ್ತಕಗಳನ್ನು ಓದುವುದರಿಂದ ಹಾಗೂ ಮಾಧ್ಯಮಗಳ ಮೂಲಕ, ಜಗತ್ತನ್ನು ಗೆದ್ದು ಮನಸ್ಸಿನ ನಿಗ್ರಹವಿಲ್ಲದೆ ಆತ್ಮಶಕ್ತಿಯನ್ನು ಕಳೆದುಕೊಂಡರೆ ಬದುಕಿನಲ್ಲಿ ಏನೂ ಪ್ರಯೋಜನ ಉಳಿಯುವುದಿಲ್ಲ. ಜೀವನದ ಉದ್ದೇಶ ಸ್ವಾರ್ಥರಹಿತವೂ ಪ್ರಾಮಾಣಿಕವೂ ಆದ ರೀತಿಯಲ್ಲಿ ಗುರಿಯನ್ನು ತಲುಪುವುದೇ ಆಗಿರುತ್ತದೆ. ದೇವರು ಮತ್ತು ಸತ್ಯವನ್ನು ಅರ್ಥೈಸಿಕೊಳ್ಳದೆ ಹೋದಲ್ಲಿ ನಮ್ಮ ಜೀವನಕ್ಕೆ ಯಾವ ಮೌಲ್ಯವೂ ಇರುವುದಿಲ್ಲ" ಎಂದು ತಿಳಿಸಿದರು.

ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ತಮ್ಮ ಪ್ರವಚನದಲ್ಲಿ ಸಾಮಾಜಿಕ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ತನ್ನದೇ ಆದ ಎಲ್ಲೆ ಇರುತ್ತದೆ ಎಂದು ತಿಳಿಸುತ್ತ, ಉರಿಯುವ ದೀಪದ ಹಾಗೆ ನಾವೆಲ್ಲ ಸಮಾಜಕ್ಕೆ ಬೆಳಕನ್ನು ನೀಡುವಂತಾಗಬೇಕು. ಅದೇ ಒಬ್ಬ ವ್ಯಕ್ತಿಯ ನಿಜವಾದ ವಿಕಸನ ಎಂದರಲ್ಲದೆ ಈ ಆರೇಳು ದಿನಗಳ ಶಿಬಿರವನ್ನು ಸದುಪಯೋಗಪಡಿಸಿಕೊಳ್ಳಲು ಸೂಚಿಸಿದರು.

ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರು ಆಶೀರ್ವಚನವನ್ನು ನೀಡುತ್ತ ಈ ಶಿಬಿರವು ಆರಂಭದಲ್ಲಿ ಮಠಾಧಿಪತಿಗಳಿಗೆ, ಜಗತ್ತಿನ ವಿದ್ಯಮಾನಗಳನ್ನು ಚರ್ಚೆಯ ಮುಖಾಂತರ ಹಾಗೂ ಸ್ವಯಂವಿಮರ್ಶೆಯ ಮುಖಾಂತರ ಅರಿತುಕೊಳ್ಳುವ ಮತ್ತು ಜೀವನಮೌಲ್ಯವನ್ನು ಉನ್ನತಿಗೊಳಿಸುವ ಉದ್ದೇಶಕ್ಕಾಗಿ ಪ್ರಾರಂಭವಾಯಿತೆಂದೂ, ಅನಂತರ ಇದನ್ನು ಸಾರ್ವಜನಿಕರಿಗೂ ಸಹ ವಿಸ್ತರಿಸಲಾಯಿತು ಎಂದು ತಿಳಿಸಿದರು. ಸಾತ್ವಿಕ ಹಾಗೂ ಸಕಾರಾತ್ಮಕ ಭಾವನೆಯಿಂದಿದ್ದು, ಜ್ಞಾನ ಮಾರ್ಗದಲ್ಲಿ ನಡೆಯುತ್ತ ತನ್ನ ತಪ್ಪುಗಳನ್ನು ಸರಿಪಡಿಸಿಕೊಂಡು ಮನಸ್ಸಿನ ಪರಿವರ್ತನೆಯನ್ನು ಹೊಂದಿ ಸಂತೋಷವನ್ನು ಕಂಡಾಗ ಮಾತ್ರ ಒಬ್ಬ ವ್ಯಕ್ತಿಯ ಹಾಗೂ ಸಮಾಜದ ವಿಕಸನ ಸಾಧ್ಯ ಎಂದು ತಿಳಿಸಿದರು.

ಶ್ರೀಮತಿ ರಾಧಾ ನೀಲಕಂಠರವರು ಕಾರ್ಯಕ್ರಮವನ್ನು ನಿರೂಪಣೆ ಮಾಡಿದರು. ಶ್ರೀಮತಿ ಪ್ರಮೀಳಾ ಶಂಕರ್ ಸ್ವಾಗತಿಸಿದರು. ಶ್ರೀ ಬಿ. ನಿರಂಜನಮೂರ್ತಿ ವಂದನಾರ್ಪಣೆ ನಡೆಸಿಕೊಟ್ಟರು.

***

"ಕ್ರಿಯಾಶೀಲತೆ ಮತ್ತು ಪರಿಶ್ರಮವನ್ನು ಅಗತ್ಯವಾಗಿ ಮೈಗೂಡಿಸಿಕೊಳ್ಳುವುದರ ಮೂಲಕ ನಮ್ಮೊಳಗಿನ ಕೀಳರಿಮೆಯನ್ನು ಕಳೆದುಕೊಳ್ಳಬೇಕು" ಎಂದು ವಿಧಾನಸಭಾಧ್ಯಕ್ಷರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಕರೆ ನೀಡಿದ್ದಾರೆ.

ಶಿಬಿರದ ಸಮಾರೋಪ ಭಾಷಣ ಮಾಡುತ್ತಿದ್ದ ಅವರು ಪ್ರತಿಯೊಬ್ಬರು ತಮ್ಮ ವ್ಯಕ್ತಿತ್ವವನ್ನು ವಿಕಸನಗೊಳಿಸಿಕೊಂಡಾಗ ಮಾತ್ರ ಒಟ್ಟಾರೆಯಾಗಿ ಸಾಮಾಜಿಕ ಸ್ವಾಸ್ಥ್ಯ ಸಾಧ್ಯವೆಂದು ಅಭಿಪ್ರಾಯಪಟ್ಟರು. ಪ್ರೀತಿ, ವಿಶ್ವಾಸ, ನಂಬಿಕೆಗಳು ನಮ್ಮ ವ್ಯಕ್ತಿತ್ವದ ಪ್ರತೀಕ. ಎಲ್ಲರಲ್ಲೂ ಆತ್ಮೀಯ ವಿಶ್ವಾಸ ಇರಬೇಕಾದದ್ದು ಅತಿ ಮುಖ್ಯ ಎಂದ ಅವರು ಇಂಥ ಶಿಬಿರಗಳು ಮಿತ ಸಂಖ್ಯೆಯ ಶಿಬಿರಾರ್ಥಿಗಳಿದ್ದರೆ ಹೆಚ್ಚು ಪರಿಣಾಮಕಾರಿಯಾಗಿ ಪರಸ್ಪರ ವಿಚಾರ ವಿನಿಮಯಕ್ಕೆ ಅವಕಾಶ ಕಲ್ಪಿಸುತ್ತದೆ ಎಂದು ಹೇಳಿದರು.

ಭ್ರಮರ ಟ್ರಸ್ಟ್ ಅಧ್ಯಕ್ಷೆ ಶ್ರೀಮತಿ ಮಾಧುರಿ ತಾತಾಚಾರಿ ಯವರು ಮಾತನಾಡಿ ಅಮೂಲ್ಯವಾದ ಸಮಯ ವ್ಯರ್ಥವಾಗದ ಹಾಗೆ "ನಾವು ನೋಡಿಕೊಳ್ಳಬೇಕು. ಅತಿಯಾಸೆಯಿಂದ ಅನೇಕ ಅನಾಹುತಗಳು ಸಂಭವಿಸುತ್ತವೆ. ವಿಶೇಷವಾಗಿ ಹೆಣ್ಣುಮಕ್ಕಳು ತೃಪ್ತ ಜೀವನವನ್ನು ನಡೆಸುವುದು ಅಗತ್ಯವಾಗಿದೆ" ಎಂದು ನುಡಿದರು.

"ಕುಟುಂಬ ಅಥವಾ ಸಮಾಜದಲ್ಲಿ ಭೇದಭಾವಗಳಿದ್ದಾಗ ಅವಘಡಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದ್ದರಿಂದ ಯಾವುದೇ ತಾರತಮ್ಯವಿಲ್ಲದೆ ಎಲ್ಲಾ ಕಾರ್ಯಗಳನ್ನು ಸಮನಾಗಿ ಹಂಚಿಕೊಳ್ಳುವುದು ಸುಖ ಸಂಸಾರಕ್ಕೆ ಹೆಚ್ಚು ಸಹಕಾರಿ" ಎಂದು ಮುಕ್ತ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಬಿ.ಎ. ವಿವೇಕ ರೈ ತಿಳಿಸಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಮುಖ್ಯಮಂತ್ರಿ ಚಂದ್ರು ಮಾತನಾಡಿ, ಯಾರ ಮನಸ್ಸಿನಲ್ಲಿ ವಿಕಾರ ಇರುವುದಿಲ್ಲವೋ ಅವರಲ್ಲಿ ಮಾತ್ರ ಮನಸ್ಸಿನ ವಿಕಸನ ಸಾಧ್ಯ ಎಂದರು.

ಬಿಜಾಪುರ ಜ್ಞಾನಯೋಗಾಶ್ರಮದ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮೀಜಿಯವರು ಶಿಬಿರಾರ್ಥಿಗಳಿಗೆಲ್ಲ ಇದು ಹೋಗಿಬರಲು ಬೀಳ್ಕೊಡುವ ಸಮಾರಂಭ. ಇಲ್ಲಿನ ಸವಿನೆನಪುಗಳು ನಿಮ್ಮೆಲ್ಲರ ಜೀವನದಲ್ಲಿ ಸದಾ ಇರಲೆಂದು ತಿಳಿಸಿದರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಶಿಬಿರದಲ್ಲಿ ಪಾಲ್ಗೊಂಡಿದ್ದವರು ಹಿಂದಿರುಗಿದ ನಂತರ ಅವರ ನಡೆ-ನುಡಿಯಲ್ಲಿ ಆಗುವ ಬದಲಾವಣೆಗಳು ಪರಿಣಾಮಕಾರಿಯಾಗಿ ಸಮಾಜದ ಮೇಲೆ ಪ್ರಭಾವ ಬೀರಿದಾಗ ಮಾತ್ರ ಇಂಥ ಶಿಬಿರಗಳು ಯಶಸ್ವಿಯಾಗಲು ಸಾಧ್ಯ. ಸ್ಪಂದನೆಯ ಮನಸ್ಸುಗಳಿದ್ದಾಗ ಹೊರಗಿನ ಹಾಗೂ ಒಳಗಿನ ಸಂಗತಿಗಳು ಅವರ ಬದಲಾವಣೆ ಸಾಧ್ಯಮಾಡಿಕೊಡುತ್ತವೆ" ಎಂದರು.

ಶಿಬಿರಾರ್ಥಿಗಳ ಪರವಾಗಿ ತುಮಕೂರಿನ ಡಾ. ಮಹದೇವಪ್ಪ, ರಾಯಚೂರಿನ ಶಾರದಾ ದಯಾಸಾಗರ್, ಬೆಂಗಳೂರಿನ ಶ್ರೀ ಕೆ.ಎಸ್. ಯಡಿಯೂರಪ್ಪ, ಬೆಳಗಾವಿಯ ಶ್ರೀಮತಿ ಶಾಂತಾ ಸಬರದ್, ಮೈಸೂರಿನ ಋಷಿ ವಿದ್ಯಾಕೇಂದ್ರದ ಶ್ರೀ ಎಚ್.ಎಸ್. ರಮೇಶ್‌ಚಂದ್ರ, ಬೆಂಗಳೂರಿನ ಕುಮಾರಿ ಸೃಷ್ಟಿಯವರು ಮಾತನಾಡಿ ಸ್ವಚ್ಛ, ಸುಂದರವಾದ ಪರಿಸರದಲ್ಲಿ ಏರ್ಪಡಿಸಿರುವ ಈ ಶಿಬಿರ ಮರೆಯಲಾಗದ ಅನುಭವಗಳನ್ನು ನೀಡಿದೆ. ಅನಿರ್ವಚನೀಯ ಆನಂದ ಉಂಟಾಗಿದೆ. ಬೇರೆ ಬೇರೆ ವೃತ್ತಿಗಳನ್ನವಲಂಬಿಸಿರುವ ನಾವು ಮಾನಸಿಕ ಶಾಂತಿ, ನೆಮ್ಮದಿ ಹಾಗೂ ಸಮಾಧಾನಗಳನ್ನು ಪಡೆದುಕೊಂಡಿದ್ದೇವೆ ಎಂದು ಕೃತಜ್ಞತೆ ವ್ಯಕ್ತಪಡಿಸಿದರು.

ಕೊಯಮತ್ತೂರಿನ ಶ್ರೀ ಷಣ್ಮುಖ ಸುಂದರಂರವರು ಮಾತನಾಡಿ, ಜೆಎಸ್‌ಎಸ್ ಮಹಾವಿದ್ಯಾಪೀಠವು ತಮಿಳುನಾಡಿನಲ್ಲಿ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿರುವುದು ಹಾಗೂ ಇಂಥ ಶಿಬಿರಗಳನ್ನು ಏರ್ಪಡಿಸಿರುವುದಕ್ಕೆ ಸಂತಸ ವ್ಯಕ್ತಪಡಿಸಿದರು.

ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿಗಾದ ಡಾ. ಬಿ. ಸುರೇಶ್‌ರವರು ಪ್ರಶಂಸಾಪತ್ರಗಳನ್ನು ವಿತರಿಸಿ ಶುಭ ಹಾರೈಸಿದರು.

ಚಿಲಕವಾಡಿಯ ಶ್ರೀ ಕುಮಾರ ನಿಜಗುಣರು ರಾಜೇಂದ್ರ ಸ್ತೋತ್ರ ಪಠಣ ಮಾಡಿದರು. ಶ್ರೀಮತಿ ಪದ್ಮಾ ಚಂದ್ರು ಹಾಗೂ ಶ್ರೀ ಕೋಕಿಲಾ ವಿವೇಕ ರೈ ಅವರುಗಳು ಮುಖ್ಯಅತಿಥಿಗಳಾಗಿ ಆಗಮಿಸಿದ್ದರು.

ಮೈಸೂರು, ಬೆಂಗಳೂರು, ತುಮಕೂರು, ಗುಲ್ಬರ್ಗಾ, ಬೆಳಗಾಂ, ವಿಜಾಪುರ, ಚಾಮರಾಜನಗರ, ಚಿಕ್ಕಮಗಳೂರು, ಮಂಗಳೂರು, ರಾಯಚೂರು ಮತ್ತು ದಾವಣಗೆರೆ ಮೊದಲಾದ ಜಿಲ್ಲೆಗಳಿಂದ ಒಟ್ಟು 180 ಪ್ರತಿನಿಧಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಶ್ರೀ ಟಿ.ಎಸ್. ಲೋಕೇಶ್‌ರವರು ವರದಿಯನ್ನು ಮಂಡಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ಉಪ ನಿರ್ದೇಶಕರಾದ ಶ್ರೀ ಮ.ಗು. ಸದಾನಂದಯ್ಯ ಸ್ವಾಗತಿಸಿದರು. ಊಟಿಯ ಫಾರ್ಮಸಿ ಕಾಲೇಜಿನ ಶ್ರೀ ಎಸ್. ಪುಟ್ಟರಾಜಪ್ಪ ವಂದನೆ ಸಲ್ಲಿಸಿದರು. ಯೋಗ ಶಿಕ್ಷಕರಾದ ವೆಂಕಟೇಶಯ್ಯ ಪ್ರಾರ್ಥನೆ ಮಾಡಿದರು. ಶ್ರೀ ಎಚ್.ಕೆ. ಬಸವಣ್ಣ ಪ್ರಶಂಸಾಪತ್ರಗಳ ವಾಚನ ಮಾಡಿದರು. ಶ್ರೀಮತಿ ರಾಧಾ ನೀಲಕಂಠ ಮತ್ತು ಶ್ರೀ ನಿರಂಜನಮೂರ್ತಿ ಇವರುಗಳು ಕಾರ್ಯಕ್ರಮ ನಿರೂಪಿಸಿದರು.

ಬೋಧಕೇತರರಿಗಾಗಿ ಶಿಬಿರ

"ನಾವು ಯಾವುದೇ ವೃತ್ತಿಯಲ್ಲಿರಲಿ ಅದನ್ನು ಸಮರ್ಥವಾಗಿ ನಿರ್ವಹಿಸಬೇಕು. ಇರುವುದನ್ನು ಬಿಟ್ಟು ಇಲ್ಲದುದರ ಕಡೆಗೆ ತುಡಿಯಬಾರದು. ಆ ಮೂಲಕ ಮಾಡುವ ಕೆಲಸದಲ್ಲೇ ಸಂತೋಷ

ಕಾಣುವಂತಾಗಬೇಕು" ಎಂದು ಕರ್ನಾಟಕ ಆಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕರಾದ ಶ್ರೀಮತಿ ಅಮಿತಾ ಪ್ರಸಾದ್‌ರವರು ಶಿಬಿರಾರ್ಥಿಗಳಿಗೆ ಕರೆ ನೀಡಿದರು.

ದಿನಾಂಕ 15.6.2009 ರಂದು ಜೆಎಸ್‌ಎಸ್ ಮಹಾ ವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಸಂಸ್ಥೆಯ ಬೋಧಕೇತರರಿಗಾಗಿ ಏರ್ಪಡಿಸಿದ್ದ ಪುನಶ್ಚೇತನ ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ವೃತ್ತಿಯಲ್ಲಿ ಜ್ಞಾನ ಕೌಶಲಗಳನ್ನು ಬೆಳೆಸಿಕೊಂಡು ನಮ್ಮ ಸಾಮರ್ಥ್ಯವನ್ನು ನಾವೇ ಕಂಡುಕೊಳ್ಳಬೇಕು. ಆ ಮೂಲಕ ಕ್ರಿಯಾಶೀಲರಾಗಿ ಧನಾತ್ಮಕ ಚಿಂತನೆಗಳನ್ನು ಮೈಗೂಡಿಸಿಕೊಂಡು ವೃತ್ತಿಪರತೆಯನ್ನು ಮೆರೆಯಬೇಕು ಎಂದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಸಮಾರಂಭದ ಸಮ್ಮುಖ ವಹಿಸಿದ್ದ ಬಿಜಾಪುರದ ಶ್ರೀ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ ಬದುಕಿನ ಜಂಜಾಟವನ್ನೆಲ್ಲಾ ನಿಸರ್ಗದ ಮಡಿಲಲ್ಲಿ ಮರೆತು ಶಿಬಿರದಲ್ಲಿ ನಿಶ್ಚಿಂತೆಯಿಂದಿದ್ದು ಮರಳುವಾಗ ಹಗುರವಾಗಿ ಹೋಗುವುದೇ ಪುನಶ್ಚೇತನ. ಜೀವನಪ್ರೇಮವನ್ನು ಬಿಟ್ಟು ಬದುಕಿನಲ್ಲಿ ಮತ್ತೇನೂ ಇಲ್ಲ. ಹೃದಯದ ಪ್ರೇಮವನ್ನು ಹರಡಿಕೊಳ್ಳುವ ಮೂಲಕ ನಮ್ಮ ವ್ಯಕ್ತಿತ್ವವನ್ನು ವಿಕಸಿಸಿಕೊಂಡರೆ ಆಗ ಜೀವನ ಸಂತೋಷ ದಾಯಕವಾಗುತ್ತದೆಂದರು.

ಶುಭ ಸಂದೇಶವನ್ನಿತ್ತ ಸಮಣೀಜಿ ಶ್ರೀ ಶೃತ್ ನಿಧೀಜಿರವರು, ಮೋಂಬತ್ತಿಯು ಕೊಠಡಿಯೊಂದನ್ನು ಬೆಳಗಿದರೆ, ಚಂದ್ರನ ಬೆಳದಿಂಗಳು ರಾತ್ರಿಯನ್ನು ಬೆಳಗಿಸುತ್ತದೆ. ಸೂರ್ಯನು ಹಗಲಲ್ಲಿ ಲೋಕವನ್ನೇ ಬೆಳಗುತ್ತಾನೆ. ಆದರೆ ಜ್ಞಾನದ ಬೆಳಕು ಇಡೀ ವಿಶ್ವವನ್ನೇ ಬೆಳಗುವ ಚಿರಂತನ ಬೆಳಕು ಎಂದು ಹೇಳಿದರು.

ಮತ್ತೋರ್ವ ಜೈನ ಮುನಿ ಡಾ. ಪದ್ಮಚಂದ್ರಜಿ ಮಹಾರಾಜ್ ಸಾಹೇಬ್‌ರವರು ಮಾತನಾಡಿ, ಹರಿಯುವ ನದಿಯ ನೀರಿನಲ್ಲಿ ಒಂದು ಕಲ್ಲು ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುವಂತೆ ಧನಾತ್ಮಕ ಚಿಂತನಗಳಲ್ಲಿ ತೊಡಗುವುದರಿಂದ ಸುಪ್ತ ಚೇತನಗಳಿಗೆ ಪುನಶ್ಚೇತನ ಉಂಟಾಗುತ್ತದೆ ಎಂದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಪ್ರಭುದೇವ್‌ರವರು, ಮಧ್ಯಮ ವರ್ಗದ ಬದುಕು ತುಮುಲಕ್ಕೆ ಇಂದು ಸಿಲುಕಿದೆ. ಜಾಗತಿಕ ಆರ್ಥಿಕ ಮುಗ್ಗಟ್ಟಿನಿಂದಾಗಿ ಅನೇಕ ಖಾಸಗಿ ಕಂಪೆನಿ ನೌಕರರ ಬದುಕು ಡೋಲಾಯಮಾನವಾಗಿದೆ. ರೈತನ ಮಗ ರೈತನೇ ಆಗಬೇಕೆಂಬ ಹಿಂದಿನ ಭಾವನೆ ಈಗ ದೂರ ಸರಿದಿದೆ. ಸರ್ಕಾರಿ ಕೆಲಸದ ವ್ಯಾಮೋಹ ಗ್ರಾಮೀಣ ಜನರಿಗೂ ಹಬ್ಬಿಕೊಂಡಿದೆ. ಆತ್ಮವಿಶ್ವಾಸ ಬೆಳೆಸುವ ಕೌಶಲಗಳನ್ನು ರೂಢಿಸಿಕೊಳ್ಳುವ ಮಹಿಳೆಯರಿಗಾಗಲಿ, ಪುರುಷರಿಗಾಗಲಿ ಎಲ್ಲಾ ಕ್ಷೇತ್ರಗಳಲ್ಲೂ ಉದ್ಯೋಗಾವಕಾಶಗಳು ಇದ್ದೇ ಇವೆ ಎಂದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಜಂಟಿ ನಿರ್ದೇಶಕರಾದ ಶ್ರೀ ಕಾ.ತ. ಚಿಕ್ಕಣ್ಣರವರು ಮಾತನಾಡಿ, "ಜೆಎಸ್‌ಎಸ್ ಸಂಸ್ಥೆಯ ಕಾರ್ಯದಕ್ಷತೆ ಇತರರಿಗೆ ಮಾದರಿಯಾಗಿದೆ. ನಮ್ಮನ್ನು ನಾವು ಪ್ರೀತಿಸುವುದನ್ನು ಕಲಿಯುವ ಮೂಲಕ ಇತರರನ್ನು ಪ್ರೀತಿಸುವುದನ್ನು ಕಲಿಯಬೇಕಿದೆ. ಕಛೇರಿಯ ಕಡತಗಳಲ್ಲೇ ನಮ್ಮ ಬದುಕು ಹುದುಗಿ ಹೋಗಬಾರದು. ನಮ್ಮ ಸುತ್ತಮುತ್ತಲ ಪರಿಸರವನ್ನು ಪ್ರೀತಿಸುವ ಮೂಲಕ ಸಮಯಪಾಲನೆ, ಅರಿವಿನ ದಾಹ, ಪಾರದರ್ಶಕತೆ, ಆತ್ಮವಿಶ್ವಾಸಗಳನ್ನು ರೂಢಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳಬೇಕು" ಎಂದು ನುಡಿದರು.

ಶ್ರೀಮತಿ ಶಶಿಕಲ ಪ್ರಾರ್ಥಿಸಿದರೆ, ಶ್ರೀ ಕೆ.ಬಿ. ಸೋಮಶೇಖರ ಮೂರ್ತಿಯವರು ಸ್ವಾಗತಿಸಿದರು. ಶ್ರೀ ಎಂ. ಗಂಗಾಧರ್ ರವರು ವಂದನಾರ್ಪಣೆ ಮಾಡಿದರು. ಶ್ರೀ ಕೆ.ಎಲ್. ಬಸಪ್ಪನವರು ಕಾರ್ಯಕ್ರಮ ನಿರೂಪಿಸಿದರು.

***

"ವೃತ್ತಿಯಲ್ಲಿ ಎದುರಾಗುವ ಸಮಸ್ಯೆಗಳನ್ನು ನಿರ್ಮಲ ಚಿತ್ತದಿಂದ, ನಗುಮೊಗದಿಂದ ಎದುರಿಸುವ ಮೂಲಕ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳಬಹುದು" ಎಂದು ಸಾರಿಗೆ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಎಂ.ಕೆ. ಶಂಕರಲಿಂಗೇಗೌಡ ರವರು ನುಡಿದರು.

ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಬೋಧಕೇತರರಿಗಾಗಿ ಸುತ್ತೂರಿನಲ್ಲಿ ಏರ್ಪಡಿಸಿದ್ದ ಪುನಶ್ಚೇತನ ಶಿಬಿರದ ಶಿಬಿರಾರ್ಥಿಗಳಿಗೆ ದಿನಾಂಕ 14.6.2009 ರಂದು

ಪ್ರಶಂಸಾಪತ್ರ ವಿತರಿಸಿ ಸಮಾರೋಪ ಭಾಷಣ ಮಾಡುತ್ತಿದ್ದ ಅವರು, ಜೀವನವನ್ನು ಮತ್ತೆ ಮತ್ತೆ ಹಿಂದಿರುಗಿ ನೋಡುತ್ತಾ ಪುನಶ್ಚೇತನಗೊಳಿಸಿಕೊಳ್ಳಬೇಕು ಎಂದರಲ್ಲದೆ, ಸೇವೆಯಲ್ಲಿರುವ ಬಹಳಷ್ಟು ಮಂದಿ ನಿವೃತ್ತಿಯ ಜೀವನ ನಡೆಸುತ್ತಿರುತ್ತಾರೆ. ಆಡಳಿತದಲ್ಲಿ ಮೇಲಿನ ಅಧಿಕಾರಿಗಳಿಂದ ಮತ್ತು ಕೆಳಗಿನವರಿಂದ ಬೋಧಕೇತರವರ್ಗದವರಿಗೆ ಮಾನಸಿಕ ಒತ್ತಡವಿರುತ್ತದೆ. ಇಂತಹ ಒತ್ತಡಗಳು ಮತ್ತು ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಲು ಇಂಥ ಪುನಶ್ಚೇತನ ಶಿಬಿರಗಳ ಅವಶ್ಯವಿದೆ ಎಂದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮ ಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ಮಾಡುವ ಕೆಲಸವೇ ನಾವಾದಾಗ ಎಂಥ ಭಾರವಾದ ಕೆಲಸವೂ ಹಗುರವಾಗುತ್ತದೆ. ಸಂಸ್ಥೆ ಅಥವಾ ವ್ಯವಸ್ಥೆಯಲ್ಲಿ ಕೆಳಗಿನ ವ್ಯಕ್ತಿಯಿಂದ ಮೇಲಿನ ಅಧಿಕಾರಿಯರೆಗೆ ಪ್ರತಿಯೊಬ್ಬರ ಕೆಲಸವೂ ಮುಖ್ಯವಾಗುತ್ತದೆ. ಎಲ್ಲರೂ ಒಮ್ಮುಖವಾಗಿ ಕೆಲಸ ನಿರ್ವಹಿಸಿದಾಗ ಒಟ್ಟಾರೆ ಯಶಸ್ಸು ಕಾಣಬಹುದೆಂಬುದನ್ನು ಸಂಶೋಧನೆಗಳೇ ತಿಳಿಸುತ್ತವೆ. ಹೃದಯವಂತಿಕೆಯಿಂದ ಸ್ಪಂದಿಸುವ ಭಾವನೆಗಳನ್ನು ಮೂಡಿಸುವ ಉದ್ದೇಶದಿಂದ ಇಂಥ ಶಿಬಿರಗಳನ್ನು ಆಯೋಜಿಸಲಾಗುತ್ತಿದೆ" ಎಂದರು. ಮುಂದುವರಿದು ಅವರು "ಸಮಾಧಾನದಿಂದ ಕಾರ್ಯ ನಿರ್ವಹಿಸುವುದು ಮುಖ್ಯ. ತಳಮಳದಿಂದ, ಒತ್ತಡದಿಂದ ಕಾರ್ಯ ನಿರ್ವಹಿಸಿದರೆ ಮಾಡುವ ಕೆಲಸವಷ್ಟೇ ಅಲ್ಲ, ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತದೆ" ಆದ್ದರಿಂದ ಜೀವನಕ್ರಮಗಳನ್ನು ಬದಲಿಸಿಕೊಳ್ಳುವ ಅಗತ್ಯವಿದೆ ಎಂದು ನುಡಿದರು.

ಬಿಜಾಪುರದ ಶ್ರೀ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ಶಿಬಿರದಲ್ಲಿ ಗಳಿಸಿಕೊಂಡ ಜ್ಞಾನ, ಕೆಲ ಕಾಲವಾದರೂ ನಿಮ್ಮ ಜೀವನವನ್ನು ಸಂತಸಗೊಳಿಸಲಿ ಎಂದು ಹಾರೈಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬೆಟ್ಟದಪುರದ ಸಲೀಲಾಖ್ಯ ಮಠದ ಶ್ರೀ ಚೆನ್ನಬಸವ ದೇಶಿಕೇಂದ್ರ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ, ಯಾವ ವ್ಯಕ್ತಿಯು ಸಹನೆ, ಔದಾರ್ಯ, ತ್ಯಾಗ ಗುಣಗಳನ್ನು ಬೆಳೆಸಿಕೊಳ್ಳುತ್ತಾನೋ ಅವನೇ ಪ್ರಬುದ್ಧನಾಗಲು ಸಾಧ್ಯವೆಂದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಶ್ರೀ ಕೆ. ಶ್ರೀಹರಿಯವರು ಮಾತನಾಡಿ, ವೃತ್ತಿಯಲ್ಲಿ ಶ್ರೇಷ್ಠ ಕನಿಷ್ಠ ಎಂಬುದಿಲ್ಲ. ಕೆಲಸ ನಿರ್ವಹಿಸುವಾಗ ಸಭ್ಯತೆಯಿರಲಿ, ಜ್ಞಾನಸಂಪಾದನೆಗೆ ನಿರಂತರ ಆಸಕ್ತಿಯಿರಲಿ, ಸಂಪಾದಿಸಿದ ಜ್ಞಾನ ಅನುಷ್ಠಾನದಲ್ಲಿ ನೆಲೆಯಾದಾಗ ವ್ಯಕ್ತಿ ಮತ್ತು ಸಂಸ್ಥೆ ಯಶಸ್ಸು ಕಾಣಬಹುದೆಂದರು.

ಮತ್ತೋರ್ವ ಅತಿಥಿ ಚಲನಚಿತ್ರ ಕಲಾವಿದೆ ಹಾಗೂ ರಂಗಕರ್ಮಿಯಾದ ಶ್ರೀಮತಿ ಅರುಂಧತಿ ನಾಗ್‌ರವರು ಮಾತನಾಡಿ, ಇತರರಿಗಾಗಿ ದಿನದಲ್ಲಿ ಅರ್ಧ ಗಂಟೆಯಾದರೂ ಕೆಲಸ ಮಾಡಬೇಕು. ನಾಟಕ ಜೀವಂತ ಕಲೆ. ಅದರಲ್ಲಿ ನಮ್ಮತನವನ್ನು ಗುರುತಿಸಿಕೊಳ್ಳಬಹುದು. ಸಿನಿಮಾ ಮತ್ತು ಟಿ.ವಿ. ಧಾರಾವಾಹಿಯಲ್ಲಿ ವಾಸ್ತವತೆ ಕಾಣಲಾಗುವುದಿಲ್ಲ. ಸ್ತ್ರೀಯರಿಗೆ ಕರ್ನಾಟಕದಲ್ಲಿ ಸಿಗುವ ಗೌರವ ಮತ್ತೆಲ್ಲೂ ಸಿಗದು. ಇಂತಹ ಸಂಸ್ಕೃತಿಯ ಗುಣಮಟ್ಟವನ್ನು ಉಳಿಸಿ ಬೆಳೆಸುತ್ತಿರುವ ಜೆಎಸ್‌ಎಸ್ ಸಂಸ್ಥೆ ಮತ್ತು ನೌಕರರು ವಿಭಿನ್ನರೆಂದು ಪ್ರಶಂಸಿಸಿದರು.

ಶಿಬಿರಾರ್ಥಿಗಳಾದ ಶ್ರೀ ನಾಗೇಂದ್ರ, ಶ್ರೀ ಎಸ್. ಶ್ರೀಧರ್, ಶ್ರೀ ಶಿವಸ್ವಾಮಿ, ಶ್ರೀ ಕೆ.ಎಸ್. ಕಾರ್ಯಸ್ವಾಮಿ ಮತ್ತು ಶ್ರೀ ಕೆ.ಎಸ್. ಸುರೇಶ್ ತಮ್ಮ ಅನಿಸಿಕೆಗಳನ್ನು ತಿಳಿಸಿದರು. ಶ್ರೀ ಕೆ.ಬಿ. ಸೋಮಶೇಖರ್ ಶಿಬಿರದ ವರದಿ ಮಂಡಿಸಿದರು.

ಸುತ್ತೂರು ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಎಂ. ಗಂಗಾಧರ್ ಸ್ವಾಗತಿಸಿದರು. ಶ್ರೀ ಎಸ್. ಷಣ್ಮುಖ ವಂದಿಸಿದರೆ, ಶ್ರೀ ಕೆ.ಎಲ್. ಬಸಪ್ಪ ಕಾರ್ಯಕ್ರಮ ನಿರೂಪಿಸಿದರು.

ಬೋಧಕೇತರ ಪುನಶ್ಚೇತನ ಶಿಬಿರದಲ್ಲಿ ಖ್ಯಾತ ಕಲಾವಿದೆ ಶ್ರೀಮತಿ ಅರುಂಧತಿ ನಾಗ್

ಹಣ ಗಳಿಕೆ ಮಾತ್ರ ಶಿಕ್ಷಣದ ಗುರಿಯಾಗಬಾರದು. ಶಿಕ್ಷಣ ಜೀವನದ ಕುರಿತು ಮೌಲಿಕವಾದ ದೃಷ್ಟಿಕೋನವನ್ನು ಕಲಿಸಬೇಕಾಗಿದೆ. ಮಗುವಿಗೆ ಸಂಸ್ಕಾರಯುತ ಶಿಕ್ಷಣ ನೀಡುವ ಅವಶ್ಯಕತೆಯಿದೆ. ಶಿಕ್ಷಣದ ಪರಿವರ್ತನೆಗೆ ಸಮಾಜದ ಅಭಿಪ್ರಾಯವೂ ಅವಶ್ಯಕ" ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ನುಡಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪ್ರೌಢಶಾಲಾ ಹಾಗೂ ಪ್ರಾಥಮಿಕ ಶಾಲಾ ಮುಖ್ಯಸ್ಥರಿಗಾಗಿ ಏರ್ಪಡಿಸಿದ್ದ ಮೂರು ದಿನಗಳ ಪುನಶ್ಚೇತನ ಶಿಬಿರದ ಶಿಬಿರಾರ್ಥಿಗಳಿಗೆ ಪ್ರಶಂಸಾಪತ್ರ ವಿತರಿಸಿ ದಿನಾಂಕ 14.6.2009 ರಂದು ಸಮಾರೋಪ ಭಾಷಣ ಮಾಡುತ್ತಿದ್ದ ಅವರು, ಸುತ್ತೂರು ಶ್ರೀಕ್ಷೇತ್ರ ಅನುಭವ ಮಂಟಪವಾಗಿ ಬೆಳೆಯುತ್ತಿದೆ. ಜೆಎಸ್‌ಎಸ್‌ನಂಥ ಸಮರ್ಪಣಾಭಾವದ ಸಂಸ್ಥೆ ಗಳಿರುವುದರಿಂದ ಎಷ್ಟೆಲ್ಲ ಆಘಾತಗಳ ನಡುವೆಯೂ ನಾಡು ನೆಮ್ಮದಿಯಿಂದ ಬದುಕುವಂತಾಗಿದೆ. ನಮ್ಮನ್ನು ಬೆಳೆಸಿರುವ ಶಾಶ್ವತವಾದ ಧಾರ್ಮಿಕ ವ್ಯವಸ್ಥೆ ಬದುಕಿಗೆ ಸದಾ ಮಾರ್ಗದರ್ಶನ ನೀಡುತ್ತಿದೆ. ಸರ್ಕಾರಿ ಮತ್ತು ಇತರೆ ಸಂಸ್ಥೆಗಳು ಶಿಬಿರಾರ್ಥಿಗಳಿಂದ ಹೆಚ್ಚು ಪ್ರೇರಣೆ ಪಡೆಯುವಂತಾಗಬೆಕು. ಭವಿಷ್ಯದಲ್ಲಿ ನಿಮ್ಮನ್ನು ಇತರರು ಅನುಸರಿಸುವಂತಾಗಬೇಕು ಎಂದು ಶಿಬಿರಾರ್ಥಿಗಳಿಗೆ ಕರೆ ನೀಡಿದರು.

ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ತಮ್ಮ ಆಶೀರ್ವಚನದಲ್ಲಿ "ವ್ಯಕ್ತಿತ್ವವನ್ನು ತೆರೆದುಕೊಳ್ಳುವುದೇ ಪುನಶ್ಚೇತನ. ವ್ಯಕ್ತಿತ್ವವಿಕಸನಕ್ಕೆ ಎಲ್ಲಿ ಅವಕಾಶ ವಿರುತ್ತದೆಯೋ ಅಲ್ಲೆಲ್ಲಾ ಸ್ವಪ್ರೇರಣೆಯಿಂದ ಭಾಗವಹಿಸುವ ಮೂಲಕ ಶಿಕ್ಷಕರು ಪರಿಣಾಮಕಾರಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಪಠ್ಯಕ್ರಮದ ಸೀಮಿತ ಪರಿಧಿಯಿಂದ ಹೊರಬರಬೇಕು" ಎಂದರಲ್ಲದೆ ಯಾವುದೇ ಜವಾಬ್ದಾರಿ ನಿರ್ವಹಿಸುವಾಗ ನಾವು ಅದರಲ್ಲಿ ಆಸಕ್ತಿಯಿಂದ ತೊಡಗಿಸಿದಾಗ ಅದರಲ್ಲಿ ಸಂತಸ ಕಾಣಬಹುದು ಎಂದು ನುಡಿದರು. ಬಿಜಾಪುರದ ಶ್ರೀ ಜ್ಞಾನಯೋಗಾಶ್ರಮದ ನಿರಾಭಾರಿ ಚರಮೂರ್ತಿಗಳಾದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳವರು ಆಶೀರ್ವಚನ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಶ್ರೀ ಜಯಂತ್ ಕಾಯ್ಕಿಣಿಯವರು ಮಾತನಾಡಿ, ಪುನಶ್ಚೇತನವೆಂದರೆ, ಎಲ್ಲಿಬೇಕಾದರೂ ಹೊಂದಿಸಿಕೊಳ್ಳುವುದು. ರೂಢಿಗತ ಕಾಲಕ್ರಮ ಮತ್ತು ಅನುಕ್ರಮಗಳನ್ನು ಮುರಿದಾಗ ಹೊಸ ಆವರಣಕ್ಕೆ ಹೋಗುತ್ತೇವೆ. ಬದುಕಿನ ಜಡತ್ವದಿಂದ ಹೊರಬರಬೇಕು. ಮಕ್ಕಳನ್ನು ಹಣ ಮಾಡುವ ಯಂತ್ರಗಳನ್ನಾಗಿ ರೂಪಿಸುವ ಒತ್ತಡದಲ್ಲಿ ಪೋಷಕರಿದ್ದಾರೆ. ಮಕ್ಕಳ ಮುಖದ ಮೇಲೆ ನಗು ಮಾಯವಾಗಿದೆ. ಪಾಲಕರು ದರಿದ್ರಭಾವದಲ್ಲಿ ಮುಳುಗಿ ಹೋಗುತ್ತಿದ್ದಾರೆ. ಇತರ ಚೆನ್ನಾಗಿ ಬೆಳೆದ ಮಕ್ಕಳನ್ನು ನೋಡಿ ಅಸೂಯೆಪಡುವ ಮನೋಭಾವ ಬೆಳೆಸಿಕೊಳ್ಳುತ್ತಿದ್ದಾರೆ. ಜೀವನದ ನೆಮ್ಮದಿಯನ್ನು ಭಯ ನುಂಗಿಹಾಕುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ಶಿಕ್ಷಕರು ಮಮತೆ ಮತ್ತು ಸಮತೆಯ ಕಣ್ಣಾಗಬೇಕೆಂದರಲ್ಲದೆ ಮುಗ್ಧ ಮಗುವಿನಂತೆ ಬೆರಗುಗಣ್ಣಿನಿಂದ ಜಗತ್ತನ್ನು ನೋಡುವ ಮತ್ತು ತಾಯಿಯ ಮಮತೆಯನ್ನು ರೂಢಿಸಿಕೊಳ್ಳುವ ಮೂಲಕ ತಮ್ಮ ವೃತ್ತಿಯಲ್ಲಿ ಯಶಸ್ಸು ಕಾಣಬಹುದೆಂದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಎಂ.ಎಚ್. ಧನಂಜಯರವರು ಮಾತನಾಡಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಂಗಸಂಸ್ಥೆಗಳು ನೀಡುತ್ತಿರುವ ವಿವಿಧ ವೃತ್ತಿ ತರಬೇತಿಗಳ ಬಗ್ಗೆ ಮಾಹಿತಿ ನೀಡಿದರು.

ಲೋಕಸೇವಾ ಆಯೋಗದ ಸದಸ್ಯರಾದ ಶ್ರೀ ಕೃಷ್ಣಪ್ರಸಾದ್ ರವರು ಮಾತನಾಡಿ, ನಡೆ ನುಡಿ, ಶಿಸ್ತು, ನಯ, ವಿನಯ ಮತ್ತು ಜ್ಞಾನ ಎಲ್ಲದರಲ್ಲೂ ಆದರ್ಶವಾದ ಶಿಕ್ಷಕರನ್ನು ವಿದ್ಯಾರ್ಥಿಗಳು ತಮ್ಮ ಪೂಜ್ಯ ವ್ಯಕ್ತಿಯನ್ನಾಗಿ ಕಂಡುಕೊಳ್ಳುತ್ತಾರೆ ಎಂದು ನುಡಿದರು.

ಇದೇ ಸಂದರ್ಭದಲ್ಲಿ ಕೈಲಾಸ ಮಾನಸ ಸರೋವರಕ್ಕೆ ಹೊರಟಿರುವ ಮೈಸೂರಿನ ಐವರು ಯಾತ್ರಾರ್ಥಿಗಳಿಗೆ ಸಚಿವ ಕಾಗೇರಿಯವರು ಸಲಕರಣೆಗಳನ್ನು ನೀಡಿ ಬೀಳ್ಕೊಟ್ಟರು.

ಸಮಾರಂಭಕ್ಕೆ ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಪಾರ್ಶ್ವಚಂದ್ರಜಿ ಮಹಾರಾಜ ಸಾಹೇಬ್, ಡಾ. ಪದಂ ಚಂದ್ರಾಜಿ ಮಹಾರಾಜ ಸಾಹೇಬ್ ಮತ್ತು ಶ್ರೀ ಜೈ ಧುರಂಧರ್ ಮುನಿಜಿ ಮಹಾರಾಜ ಸಾಹೇಬ್‌ರವರುಗಳಲ್ಲದೆ, ದೆಹಲಿ ಕನ್ನಡ ಸಂಘದ ಅಧ್ಯಕ್ಷರಾದ ಡಾ. ಸಿ.ವಿ. ಗೋಪಿನಾಥ್‌ರವರು ಉಪಸ್ಥಿತರಿದ್ದರು.

ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು

ಪದವೀಧರರ ದಿನಾಚರಣೆ

ದಿನಾಂಕ 24.4.2009 ರಂದು ಕಾಲೇಜಿನಲ್ಲಿ "ಪದವೀಧರರ ದಿನಾಚರಣೆ" ವಿಜೃಂಭಣೆಯಿಂದ ಜರುಗಿತು. ಆ ಸಂದರ್ಭದಲ್ಲಿ ಮಾತನಾಡಿದ ಭಾರತೀಯ ವೈದ್ಯ ಶಿಕ್ಷಣ ಮಂಡಳಿಯ ಉಪಾಧ್ಯಕ್ಷರಾದ ಡಾ. ಪಿ. ಸಿ. ಕೇಶವನ್ ಕುಟ್ಟಿಯವರು, ವೈದ್ಯ ಶಿಕ್ಷಣಕ್ಕೆ ಹೊಸ ಸ್ವರೂಪ ನೀಡುವ ನಿಟ್ಟಿನಲ್ಲಿ ಶೈಕ್ಷಣಿಕ ಘಟಕದ ಸ್ಥಾಪನೆಗೆ ಶಿಕ್ಷಣ ಮಂಡಳಿ ನಿರ್ಧರಿಸಿದೆ ಎಂದು ತಿಳಿಸಿದರು. ಪಠ್ಯಕ್ರಮ, ಉಪಕರಣ, ತಾಂತ್ರಿಕತೆ, ಬೋಧನೆ ಮತ್ತು ಕಲಿಕೆ, ಪರೀಕ್ಷಾಂಗಕ್ಕೆ ಸಂಬಂಧಿಸಿದಂತೆ ಸಾಂದರ್ಭಿಕ ಪರಿಷ್ಕರಣೆಯ ಹೊಸ ಸಾಧ್ಯತೆಗಳನ್ನು ಈ ಘಟಕದ ಮೂಲಕ ಕಂಡುಕೊಳ್ಳಲಾಗುವುದು ಎಂದು ಅವರು ನುಡಿದರು.

ವೈದ್ಯ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ಅಂಗಸಂಸ್ಥೆಗಳೂ ಕಾಳಜಿ ವಹಿಸಿದರೆ ಉತ್ತಮ ವೈದ್ಯಕೀಯ ಶಿಕ್ಷಣ ಮತ್ತು ಆರೋಗ್ಯಕರ ಸಮಾಜವನ್ನು ರೂಪಿಸುವುದು ಸಾಧ್ಯ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಸಾರ್ವತ್ರೀಕರಣ ಅಗತ್ಯ: 'ಲಭ್ಯತೆ, ಸಮ್ಯಾತೆ ಮತ್ತು ಗುಣಾತ್ಮಕತೆ' ಈ ಮೂರು ತತ್ತ್ವಗಳನ್ನು ಪ್ರಸ್ತುತಗೊಳಿಸಿಕೊಳ್ಳುವ ಮೂಲಕ ಉನ್ನತ ಶಿಕ್ಷಣ ದಾರಿ ಮತ್ತು ಗುರಿಯನ್ನು ಸ್ಪಷ್ಟಗೊಳಿಸಿಕೊಳ್ಳಬೇಕು; ಕೆಲವರಿಗೆ ಮಾತ್ರ ಉನ್ನತ ವ್ಯಾಸಂಗ ಸಾಧ್ಯ, ಎನ್ನುವ ಸ್ಥಿತಿ ಬದಲಾಗಿ, ಶಿಕ್ಷಣವು ಸಾರ್ವತ್ರೀಕರಣ ವಾಗಬೇಕು. ಅದೇ ರೀತಿ ದುಬಾರಿಯಾಗಿರುವ ವೈದ್ಯ ಶಿಕ್ಷಣವೂ ಎಲ್ಲ ಅರ್ಹ ವಿದ್ಯಾರ್ಥಿಗಳಿಗೂ ದೊರೆಯುವಂತಾಗ ಬೇಕು ಎಂದು ಆಶಿಸಿದರು.

"ವೈದ್ಯ ಶಿಕ್ಷಣವು ಇಂದು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಅದಕ್ಕೆ ಉತ್ತರ ಕಂಡುಕೊಳ್ಳಲು ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ನಿರ್ವಾಹಕರು, ಯೋಜನೆಗಳ ನಿರೂಪಕರು, ಆಡಳಿತಗಾರರು ಮತ್ತು ಶಿಕ್ಷಣ ತಜ್ಞರು ಒಟ್ಟಾಗಿ ಕುಳಿತು ಚಿಂತನೆಗಳನ್ನು ಹಂಚಿಕೊಂಡು 'ಸಮಗ್ರ ಕ್ರಿಯಾ ಯೋಜನೆ'ಯನ್ನು ರೂಪಿಸಿ ಅದನ್ನು ಅನುಷ್ಠಾನಕ್ಕೆ ತರಬೇಕು ಎಂದು ಸಲಹೆ ನೀಡಿದರು.

ವಿವಿಧ ವಿಷಯಗಳಲ್ಲಿ ಚಿನ್ನದ ಪದಕ, ನಗದು ಬಹುಮಾನ ಪಡೆದ ಪದವೀಧರರನ್ನು ಸಮಾರಂಭದಲ್ಲಿ ಪುರಸ್ಕರಿಸಲಾಯಿತು. 'ಕರ್ತವ್ಯ ಸಂಹಿತೆಗೆ ಬದ್ಧರಾಗಿರುತ್ತೇವೆ' ಎಂದು ಕಿರಿಯ ವೈದ್ಯರು ಪ್ರಮಾಣ ವಚನ ಸ್ವೀಕರಿಸಿದರು. ಡಾ. ಎಂ. ಡಿ. ರವಿ ಪ್ರಮಾಣ ವಚನ ಬೋಧಿಸಿದರು. ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳೂ, ಸುತ್ತೂರು ಮಠದ ಜಗದ್ಗುರುಗಳು ಆದ ಪರಮಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ ಯವರು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಕುಲಪತಿ ಡಾ. ಬಿ. ಸುರೇಶ್ ಮಾತನಾಡಿದರು. ಸಹಕುಲಾಧಿಪತಿ ಶ್ರೀ ಬಿ.ಎನ್.ಬೆಟ್‌ಕೆರೂರ್ ಅಧ್ಯಕ್ಷತೆ ವಹಿಸಿದ್ದರು. ಜೆಎಸ್‌ಎಸ್ ವೈದ್ಯಕೀಯ ಮಹಾ ವಿದ್ಯಾಲಯ ಪ್ರಾಂಶುಪಾಲರಾದ ಡಾ. ಎಚ್. ಬಸವನಗೌಡಪ್ಪ ಸ್ವಾಗತಿಸಿದರು. ಡಾ. ಬಿ. ಮಂಜುನಾಥ್ ವಂದಿಸಿದರು.

ರಾಷ್ಟ್ರೀಯ ವಿಚಾರಸಂಕಿರಣ

"ಯುವ ವೈದ್ಯರು ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅನುಕರಿಸುವ ಬದಲು ಗ್ರಾಮೀಣ ಪ್ರದೇಶದಲ್ಲಿ ಸೇವೆ ಮಾಡುವ ಮನೋಭಾವ ಬೆಳೆಸಿಕೊಳ್ಳಬೇಕು" ಎಂದು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಅಧ್ಯಕ್ಷ ಡಾ. ಆರ್. ಬಾಲಸುಬ್ರಹ್ಮಣ್ಯಂ ಸಲಹೆ ನೀಡಿದರು.

ಕಾಲೇಜಿನ ರಜತ ಮಹೋತ್ಸವದ ನೆನಪಿಗೆ "ಸುಸ್ಥಿರ ಗ್ರಾಮೀಣ ಆರೋಗ್ಯಾಭಿವೃದ್ಧಿ"ಕುರಿತು ಆಯೋಜಿಸಿರುವ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ಅವರು 10.5.2009 ರಂದು ಮಾತನಾಡಿದರು.

"ವೈದ್ಯಕೀಯ ಕೋರ್ಸ್ ಆಯ್ಕೆ ಮಾಡಿಕೊಂಡು ಸಾಕಷ್ಟು ವಿದ್ಯಾರ್ಥಿಗಳು ಬರುತ್ತಾರೆ. ಅವರಲ್ಲಿ ಬಹಳಷ್ಟು ಮಂದಿಗೆ ಗ್ರಾಮೀಣ ಸ್ಥಿತಿಗತಿಗಳ ಅರಿವು ಇರುವುದಿಲ್ಲ. ಇಂಥ ಪರಿಸ್ಥಿತಿ ಇದ್ದಾಗ ಸುಸ್ಥಿರ ಆರೋಗ್ಯ ಕಾಪಾಡುವುದು ಕಷ್ಟ" ಎಂದು ನುಡಿದರು.

ದೇಶದ ಬಜೆಟ್‌ನಲ್ಲಿ ಶೇ.17 ರಷ್ಟು ಹಣವನ್ನು ಆರೋಗ್ಯಕ್ಕೆ ವೆಚ್ಚ ಮಾಡಲಾಗುತ್ತಿದೆ. ಆದರೂ ಎಲ್ಲರಿಗೂ ಆರೋಗ್ಯ ಸೌಲಭ್ಯ ಕೊಡಲಾಗುತ್ತಿಲ್ಲ. ರಾಜ್ಯದಲ್ಲಿ 1786 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಶೇ. 29 ರಷ್ಟು ಮಂದಿಗೆ ಮಾತ್ರ ಶುದ್ಧವಾದ ಕುಡಿಯುವ ನೀರು ದೊರಕುತ್ತಿದೆ. ಶೇ. 8 ರಷ್ಟು ಮಂದಿಗೆ

ಶೌಚಾಲಯ ಸೌಲಭ್ಯ ಇದೆ. ಶೇ. 30 ರಷ್ಟು ಗ್ರಾಮೀಣ ಜನರಿಗೆ ಆರೋಗ್ಯ ಸೌಲಭ್ಯ ಲಭಿಸುತ್ತಿದೆ ಎಂದು ಅಂಕಿ-ಅಂಶಗಳನ್ನು ವಿವರಿಸಿದರು.

ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಸುರೇಶ್‌ರವರು ಮಾತನಾಡಿ, "ಗ್ರಾಮೀಣ ಭಾಗದಲ್ಲಿ ಶೇ. 70 ರಷ್ಟು ಮಂದಿಗೆ ಸರಿಯಾದ ವೈದ್ಯ ಶುಶ್ರೂಷೆ ಸಿಗುತ್ತಿಲ್ಲ. ಗ್ರಾಮೀಣ ಆರೋಗ್ಯವೇ ಇಂದು ನಮ್ಮ ಮುಂದಿರುವ ಪ್ರಮುಖ ಸವಾಲು. ಮಾದರಿ ಆರೋಗ್ಯ ಗ್ರಾಮಗಳನ್ನು ಇಂದು ರೂಪಿಸಬೇಕಾಗಿದೆ" ಎಂದು ಸಲಹೆ ನೀಡಿದರು.

ಆಂಧ್ರಪ್ರದೇಶದ ಡಾ. ನಾಗೇಶ್ವರ ರೆಡ್ಡಿಯವರು ಮಾತನಾಡಿ, "ಭಾರತದಲ್ಲಿ ಶೇ. 30 ರಷ್ಟು ಮಂದಿ ಉದರಬೇನೆಯಿಂದ ಬಳಲುತ್ತಿದ್ದಾರೆ. ಪೌಷ್ಟಿಕಾಂಶ ಕೊರತೆ, ಅನ್ನ ಹಾಗೂ ಹೆಚ್ಚಿನ ಮಸಾಲೆಗಳ ಬಳಕೆ ಇದಕ್ಕೆ ಕಾರಣ" ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್. ಬಸವನಗೌಡಪ್ಪ ನವರು ಜೆಎಸ್‌ಎಸ್ ಮಹಾವಿದ್ಯಾಪೀಠವು ಕೈಗೊಂಡಿರುವ ಆರೋಗ್ಯ ಕಾರ್ಯಕ್ರಮಗಳ ವಿವರಗಳನ್ನು ಸಭೆಗೆ ನೀಡಿದರು.

ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ತಜ್ಞ ವೈದ್ಯರು ಹಾಗೂ ಗ್ರಾಮೀಣ ಆರೋಗ್ಯ ಸೇವೆಯಲ್ಲಿ ನಿರತರಾದವರು ವಿಚಾರ ಸಂಕಿರಣದಲ್ಲಿ ತಮ್ಮ ಲೇಖನಗಳನ್ನು ಮಂಡಿಸಿದರು.

ಜೆಎಸ್‌ಎಸ್ ದಂತ ವೈದ್ಯಕೀಯ ಕಾಲೇಜು, ಮೈಸೂರು

ಇಂಡಿಯನ್ ಅಕ್ಯಾಡೆಮಿ ಆಫ್ ಓರಲ್ ಮೆಡಿಸಿನ್ ಅಂಡ್ ರೇಡಿಯಾಲಜಿಯ ಆಶ್ರಯದಲ್ಲಿ ಇತ್ತೀಚೆಗೆ ಚೆನ್ನೈನಲ್ಲಿ ನಡೆದ ವಿದ್ಯಾರ್ಥಿ ವಿಚಾರಸಂಕಿರಣದಲ್ಲಿ ಕಾಲೇಜಿನ ಅಂತಿಮ ವರ್ಷದ ಬಿಡಿಎಸ್ ವಿದ್ಯಾರ್ಥಿನಿ ಕು. ನೀಲಾಂಜನ ಸರ್ಕಾರ್ ತನ್ನ "ಚೇಂಜಿಂಗ್ ಫೇಸಸ್ ಇನ್ ಹೆಡ್ ಅಂಡ್ ನೆಕ್ ಕ್ಯಾನ್ಸರ್: ಪ್ಯಾಥೊಜೆನಿಸಿಸ್ ಅಂಡ್ ಮ್ಯಾನೇಜ್‌ಮೆಂಟ್" ಎಂಬ ಬರಹಕ್ಕೆ "ಅತ್ಯುತ್ತಮ ಪ್ರಬಂಧ" ಪ್ರಶಸ್ತಿ ಗಳಿಸಿರುತ್ತಾರೆ.

ಇದೇ ಗೋಷ್ಠಿಯಲ್ಲಿ ಅಂತಿಮ ವರ್ಷದ ಬಿಡಿಎಸ್ ವಿದ್ಯಾರ್ಥಿನಿಯರಾದ ಕು. ಸಾಯಿ ರಂಜಿನಿ ಮತ್ತು ಕಾವ್ಯಶ್ರೀ ಇವರುಗಳು ತಮ್ಮ "ಬಿವೇರ್ ಡೆಂಟಿಸ್ಟ್ಸ್ ಇವೇಡ್ ದಿ ಹಜಾರ್ಡ್ಸ್" ಎಂಬ ಚಿತ್ರಕ್ಕೆ "ಅತ್ಯುತ್ತಮ ಭಿತ್ತಿಚಿತ್ರ " ಪ್ರಶಸ್ತಿಯನ್ನು ಪಡೆದಿದ್ದಾರೆ.

ಓರಲ್ ಮೆಡಿಸಿನ್ ಅಂಡ್ ರೇಡಿಯಾಲಜಿ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು ಆದ ಡಾ. ಕಾರ್ತಿಕೇಯ ಪಾಟೀಲ್ ಮತ್ತು ಪ್ರೊ. ವಿ.ಜಿ. ಮಹಿಮಾ ಅವರುಗಳು ಈ ಪ್ರತಿಭಾವಂತ ವಿದ್ಯಾರ್ಥಿನಿಯರಿಗೂ ಮಾರ್ಗದರ್ಶನ ಮಾಡಿದ್ದರು. ಅವರೆಲ್ಲರಿಗೂ ಮಹಾವಿದ್ಯಾಪೀಠದ ಪರವಾಗಿ ಅಭಿನಂದನೆಗಳು.

JSS Dental Students bag awards

Smt. Nilanjan Sarkar, Fianl Year BDS student of JSS Dental College and Hospital, won the Best Paper Award for her paper titled "Changing Faces in Head and Neck Cancer - Pathogenesis and Management" in the recently held National BDS Students Seminar in Oral Medicine and Radiology at Chennai under the banner of Indian Academy of Oral Medicine and Radiology.

Sai Ranjini and Kavyashree also of Final Year, jointly won the Best Poster Award for theier poster "Beware dentists - Evade the Hazards" at the same event.

They were guided by Dr. Karthikeya Patil, Professor and Head,Department of Oral Medicine and Radiology and Dr. V.G. Mahima, Professor, Department of Oral Medicine and Radiology. JSS MVP Congratulation all of them.

ಬೆಂಗಳೂರಿನ ವಿವೇಕಾನಂದ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ನಡೆದ 2009-10 ನೇ ಸಾಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಂತರ ಕಾಲೇಜು ಚೆಸ್ ಪಂದ್ಯಾವಳಿಯಲ್ಲಿ ಸಂಸ್ಥೆಯ ವಿದ್ಯಾರ್ಥಿಗಳು (ಪುರುಷರ ವಿಭಾಗ) ರನ್ನರ್ಸ್ ಟ್ರೋಫಿಯನ್ನು ಪಡೆದುಕೊಂಡಿದ್ದಾರೆ.

ಸುತ್ತ ಮುತ್ತ

ಜಗದ್ಗುರು ಶ್ರೀ ಶಿವರಾತ್ರೀಶ್ವರ ಪ್ರೌಢಶಾಲೆ
ಮಹದೇವನಗರ, ನಂಜನಗೂಡು

ಮಾರ್ಚ್ 2009 ರಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಶಾಲೆಯಿಂದ ಒಟ್ಟು 40 ವಿದ್ಯಾರ್ಥಿಗಳು ಹಾಜರಾಗಿದ್ದು ಎಲ್ಲಾ ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದು ಶೇಕಡವಾರು ಫಲಿತಾಂಶ 100% ಬಂದಿರುತ್ತದೆ. ಅದರಲ್ಲಿ ಪ್ರಥಮ ದರ್ಜೆಯಲ್ಲಿ 8, ದ್ವಿತೀಯ ದರ್ಜೆಯಲ್ಲಿ 15 ಹಾಗೂ ತೃತೀಯ ದರ್ಜೆಯಲ್ಲಿ 17 ಜನ ಪಾಸಾಗಿದ್ದಾರೆ.

ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ

"ಇಂದಿನ ಸಮಾಜದಲ್ಲಿ ಮಹಿಳೆಯರ ಮುಂದೆ ಹಲವು ಸವಾಲುಗಳಿರುವುದರಿಂದ ಅವುಗಳನ್ನು ಎದುರಿಸಲು ಅವರು ಆರ್ಥಿಕವಾಗಿ ಸ್ವಾವಲಂಬಿಗಳಾಗಬೇಕಾದದ್ದು ಅತ್ಯಗತ್ಯ. ಈ ನಿಟ್ಟಿನಲ್ಲಿ ವಿದ್ಯಾರ್ಥಿನಿಯರು ಆತ್ಮಸ್ಥೈರ್ಯದಿಂದ ತಮ್ಮ ಗುರಿ ಸಾಧಿಸುವ ಕಡೆ ದಿಟ್ಟ ಹೆಜ್ಜೆ ಇಡಬೇಕು" ಎಂದು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಂ.ಡಿ. ಪುಷ್ಪಾವತಿ ಅವರು ವಿದ್ಯಾರ್ಥಿನಿಯರಿಗೆ ಕರೆ ನೀಡಿದರು. ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಅಂತಿಮ ಪದವಿ ವಿದ್ಯಾರ್ಥಿನಿಯರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು ವಿದ್ಯಾರ್ಥಿನಿಯರು ಸತತ ಪರಿಶ್ರಮದೊಂದಿಗೆ ಉನ್ನತ ವ್ಯಾಸಂಗ ಮಾಡಿ ತಾವು ಓದಿದ ಕಾಲೇಜಿಗೆ, ಅಧ್ಯಾಪಕರಿಗೆ ಮತ್ತು ಪೋಷಕರಿಗೆ ಕೀರ್ತಿ ತರಲೆಂದು ಹಾರೈಸಿದರು.

ಕಾಲೇಜಿನ ಉಪ ಪ್ರಾಂಶುಪಾಲರಾದ ಶ್ರೀ ಎ.ಜಿ. ಶಿವಕುಮಾರ್ ಮಾತನಾಡಿ, ಬೀಳ್ಕೊಡುಗೆ ಎಂದರೆ ವಿದ್ಯಾರ್ಥಿನಿಯರು ಕಾಲೇಜಿ ನಿಂದ ದೂರ ಸರಿಯುವ ಕಾರ್ಯಕ್ರಮ ಎಂದು ಅರ್ಥ ಕಲ್ಪಿಸಿಕೊಳ್ಳದೆ, ಉನ್ನತ ಶಿಕ್ಷಣದತ್ತ ಅವರು ಸಾಗಲು ಪ್ರೇರಣೆ ನೀಡುವ ಕಾರ್ಯಕ್ರಮ ಎಂದು ತಿಳಿಯಬೇಕು. ಈ ದಿಕ್ಕಿನಲ್ಲಿ ವಿದ್ಯಾರ್ಥಿನಿಯರು ದೃಢ ಸಂಕಲ್ಪದೊಂದಿಗೆ ಮುನ್ನಡೆಯಬೇಕೆಂದು ಕರೆ ನೀಡಿದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ಕೆ. ರಾಮಮೂರ್ತಿರಾವ್ ಮಾತನಾಡಿ, ಇದೊಂದು ಅಧ್ಯಾಪಕರು ಮತ್ತು ವಿದ್ಯಾರ್ಥಿನಿಯರ ನಡುವಿನ ಭಾವನಾತ್ಮಕ ಸಂಬಂಧವನ್ನು ಬೆಸೆಯುವಂತಹ ವಿಶಿಷ್ಟ ಕಾರ್ಯಕ್ರಮ. ದೇಶದ ಸತ್ಪ್ರಜೆಗಳಾಗಬೇಕೆಂಬ ಆಶಯವನ್ನಿಟ್ಟುಕೊಂಡು ಉನ್ನತ ವ್ಯಾಸಂಗದ ಕಡೆಗೆ ಏಕಾಗ್ರತೆಯೊಂದಿಗೆ ಮುಂದುವರೆಯುವಂತಾಗಲೆಂದು ವಿದ್ಯಾರ್ಥಿನಿಯರಿಗೆ ಶುಭ ಹಾರೈಸಿದರು.

ಸಮಾಜಶಾಸ್ತ್ರ ವಿಭಾಗದ ಪ್ರೊ. ರೇಚಣ್ಣನವರು ಮಾತನಾಡಿ ಜೆಎಸ್‌ಎಸ್ ಸಂಸ್ಥೆಯು ನಡೆಸುತ್ತಿರುವ ಉನ್ನತ ಶಿಕ್ಷಣ ಹಾಗೂ ವೃತ್ತಿಪರ ಕೋರ್ಸುಗಳ ಉಪಯೋಗವನ್ನು ವಿದ್ಯಾರ್ಥಿನಿಯರು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಬೇಕೆಂದು ಆಶಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಪ್ರೊ. ಎಸ್. ನಾಗೇಂದ್ರ ಸ್ವಾಗತಿಸಿದರು. ವಿದ್ಯಾರ್ಥಿನಿಯರಾದ ವಾಣಿಶ್ರೀ, ಮಮತ, ಲಾವಣ್ಯ, ರೂಪಶ್ರೀ ಕಾಲೇಜಿನಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು. ಕೊನೆಯಲ್ಲಿ ಶ್ರೀ ವೀರಭದ್ರಸ್ವಾಮಿಯವರು ವಂದನಾರ್ಪಣೆ ಮಾಡಿದರು.

ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್
ಸರಸ್ವತಿಪುರಂ, ಮೈಸೂರು

ಕಾಲೇಜಿನ ವತಿಯಿಂದ ವಾರ್ಷಿಕ ಸಾಂಸ್ಕೃತಿಕ ಮತ್ತು ಸಾಹಿತ್ಯ ಕೂಟದ 'ಝೇಂಕಾರ್-2009' ಉದ್ಘಾಟನಾ ಕಾರ್ಯಕ್ರಮವನ್ನು ದಿನಾಂಕ 26.4.2009 ರಂದು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದಲ್ಲಿರುವ ಶ್ರೀ ರಾಜೇಂದ್ರ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಉದ್ಘಾಟನೆಯನ್ನು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಬಸವನಗೌಡಪ್ಪ ನವರು ನೆರವೇರಿಸಿದರು. ಇಂಥದೊಂದು ಸಾಂಸ್ಕೃತಿಕ ಕೂಟವನ್ನು ಹಮ್ಮಿಕೊಂಡಿರುವ ಜೆಎಸ್‌ಎಸ್ ಶುಶ್ರೂಷಾ ಕಾಲೇಜನ್ನು ಅಭಿನಂದಿಸಿದ ಅವರು "ರಾಜ್ಯದಲ್ಲಿ 312ಕ್ಕೂ ಹೆಚ್ಚು ಶುಶ್ರೂಷಾ ಕಾಲೇಜುಗಳಿದ್ದು ಅವುಗಳಲ್ಲಿ ಕೆಲವು ಮಾತ್ರ ಉತ್ತಮ ಶಿಕ್ಷಣ ನೀಡುತ್ತಿವೆ. ಅಂತಹ ಪ್ರಮುಖ ಸಂಸ್ಥೆಗಳಲ್ಲಿ ಜೆಎಸ್‌ಎಸ್ ಶುಶ್ರೂಷಾ ಕಾಲೇಜು ಕೂಡ ಒಂದಾಗಿದ್ದು, ಉತ್ತಮ ಬೋಧಕವರ್ಗ ಮತ್ತು ಕ್ಲಿನಿಕಲ್ ಸೌಲಭ್ಯಗಳ ಸಹಕಾರದಿಂದ ಉತ್ತಮ ಶಿಕ್ಷಣ ನೀಡುವಲ್ಲಿ ಮುಂದಾಗಿದೆ" ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜೆಎಸ್‌ಎಸ್ ಕಾಲೇಜ್ ಆಫ್ ನರ್ಸಿಂಗ್‌ನ ಉಪ ಪ್ರಾಂಶುಪಾಲರು ಮತ್ತು ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎನ್.ವಿ. ಮುನಿನಾರಾಯಣಪ್ಪನವರು ತಮ್ಮ ಭಾಷಣದಲ್ಲಿ ಕಾಲೇಜಿನ ವಾರ್ಷಿಕ ಸಾಂಸ್ಕೃತಿಕ ಕೂಟವನ್ನು ಪ್ರತಿವರ್ಷವೂ ಹಮ್ಮಿಕೊಳ್ಳಲಾಗುತ್ತಿರುವುದು ಹೆಮ್ಮೆಯ ಸಂಗತಿ ಎಂದು ನುಡಿದರು. ಇದೇ ಸಂದರ್ಭದಲ್ಲಿ ಆಟೋಟಗಳ ಎಲ್ಲಾ ಸ್ಪರ್ಧೆಗಳಲ್ಲಿ ಗುಣಾತ್ಮಕ ಮನೋಭಾವದಿಂದ ಭಾಗವಹಿಸುವಂತೆ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಈ ಕೂಟದಲ್ಲಿ ಹಲವಾರು ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಹೊರಾಂಗಣ ಸ್ಪರ್ಧೆಗಳು ದಿನಾಂಕ 21.4.2009 ರಿಂದ ಆರಂಭವಾಗಿ 24.4.2009 ರಂದು ಮುಕ್ತಾಯಗೊಂಡಿತು. ಇವುಗಳಲ್ಲಿ ಚಿತ್ರ ಬರೆಯುವುದು, ರಂಗೋಲಿ ಬಿಡಿಸುವುದು, ಹೂವಿನ ಅಲಂಕಾರ, ತರಕಾರಿಗಳಿಂದ ಚಿತ್ರ ರಚಿಸುವುದು, ಕಾಗದದಲ್ಲಿ ಅಲಂಕಾರ, ವಿಭಿನ್ನ ಶೈಲಿಯ ಹಸ್ತಾಕ್ಷರಗಳು ಮುಂತಾದ ಸ್ಪರ್ಧೆಗಳಿದ್ದವು. ಒಳಾಂಗಣ ಸ್ಪರ್ಧೆಗಳನ್ನು ರಾಜೇಂದ್ರ ಸಭಾಂಗಣದಲ್ಲಿ ದಿನಾಂಕ 26.4.2009 ಮತ್ತು 27.4.2009 ರಂದು ಹಮ್ಮಿಕೊಳ್ಳಲಾಗಿತ್ತು. ಇವುಗಳಲ್ಲಿ ನಾಟಕ, ನೃತ್ಯ, ಗಾಯನ, ಪದ್ಯವಾಚನ, ಹೇರ್‌ಸ್ಟೈಲ್ ಡಿಸೈನ್, ಮಿಸ್ಟರ್ ಮತ್ತು ಮಿಸ್ ಕಾನ್ ಸ್ಪರ್ಧೆಗಳೂ ಸೇರಿದ್ದುವು.

ಸಾಂಸ್ಕೃತಿಕ ಸಮಾರಂಭದ ಸಮಾರೋಪವನ್ನು ದಿನಾಂಕ 27.4.2009 ರಂದು ಶ್ರೀ ರಾಜೇಂದ್ರ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಡೆಪ್ಯುಟಿ ರಿಜಿಸ್ಟ್ರಾರ್ (ಶೈಕ್ಷಣಿಕ) ಡಾ. ಕುಶಾಲಪ್ಪನವರು ಈ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ತಮ್ಮ ಭಾಷಣದಲ್ಲಿ ಅವರು ತಮ್ಮ ಹಾಗೂ ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ನಡುವಣ 10 ವರ್ಷಕ್ಕೂ ಹೆಚ್ಚಿನ ಸಂಬಂಧವನ್ನು ಸ್ಮರಿಸಿದರು.

ಹಿರಿಯ ನಿವೃತ್ತ ನರ್ಸಿಂಗ್ ಶಿಕ್ಷಕರಾದ ಡಾ. ರಂಗಸ್ವಾಮಿ ಯವರು ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ತಮ್ಮ ಭಾಷಣದಲ್ಲಿ ಅವರು ಮೈಸೂರಿನಲ್ಲಿರುವ ಕೆಲವು ಉತ್ತಮ ನರ್ಸಿಂಗ್ ಕಾಲೇಜುಗಳಲ್ಲಿ ಜೆಎಸ್‌ಎಸ್ ನರ್ಸಿಂಗ್ ಕಾಲೇಜು ಒಂದಾಗಿದ್ದು ಉತ್ತಮ ಶಿಕ್ಷಣ ನೀಡುವಲ್ಲಿ ಸಫಲವಾಗಿದೆ ಎಂದರು. ಇದೇ ಸಂದರ್ಭದಲ್ಲಿ ಶುಶ್ರೂಷಕರಿಗೆ ಇರುವ ವಿವಿಧ ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿಕೊಟ್ಟರು. ಶುಶ್ರೂಷಾ ಕ್ಷೇತ್ರದಲ್ಲಿನ ಸೇವೆಗಾಗಿ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಜೆಎಸ್‌ಎಸ್ ನರ್ಸಿಂಗ್ ಕಾಲೇಜಿನ ಉಪಪ್ರಾಂಶುಪಾಲರಾದ ಡಾ. ಎನ್.ವಿ. ಮುನಿನಾರಾಯಣಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕಾರ್ಯಕ್ರಮದ ಆಯೋಜಕರನ್ನು ಪ್ರಶಂಸಿಸಿದರು ಮತ್ತು ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಅಭಿನಂದಿಸಿದರು.

□

ಬೆಳದಿಂಗಳ ಸಂಗೀತ

7.7.2009 ಮಂಗಳವಾರ ಸಂಜೆ 6.00

ಗಾಯನ

ವಿದುಷಿ ಪ್ರಾರ್ಥನಾ ಸಾಯಿ ನರಸಿಂಹನ್

ಚೆನ್ನೈ

ಸ್ಥಳ : ಶ್ರೀ ಸುತ್ತೂರು ಮಠ
(ಮೈಸೂರು ಶಾಖೆ), ಮೈಸೂರು

ಮೈಸೂರಿನಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ ಏರ್ಪಡಿಸಿದ್ದ ವಿಚಾರ ಸಂಕಿರಣದ ಉದ್ಘಾಟನಾ ಸಮಾರಂಭದಲ್ಲಿ ಜೆಎಸ್‌ಎಸ್ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಸುರೇಶ್ ಅವರು ಜ್ಯೋತಿಬೆಳಗುತ್ತಿದ್ದಾರೆ. ಚಿತ್ರದಲ್ಲಿ ಡಾ. ಬಾಲಸುಬ್ರಹ್ಮಣ್ಯಂ, ಡಾ. ಡಿ. ನಾಗೇಶ್ವರ ರೆಡ್ಡಿ, ಡಾ. ಎಚ್. ಬಸವನಗೌಡಪ್ಪ ಮುಂತಾದವರು.

ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರೌಢಶಾಲಾ ಹಾಗೂ ಪ್ರಾಥಮಿಕ ಶಾಲಾ ಮುಖ್ಯಸ್ಥರಿಗಾಗಿ ಏರ್ಪಡಿಸಿದ್ದ ಪುನಶ್ಚೇತನ ಶಿಬಿರವನ್ನು ಶ್ರೀಗಳವರ ಸಾನ್ನಿಧ್ಯದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ನವರು ಉದ್ಘಾಟಿಸಿದರು. ಚಿತ್ರದಲ್ಲಿ ಬಿಜಾಪುರ ಜ್ಞಾನಯೋಗಾಶ್ರಮದ ಶ್ರೀ ಸಿದ್ಧೇಶ್ವರ ಮಹಾಸ್ವಾಮಿಗಳು, ಸಾಹಿತಿ ಡಾ. ಗುರುಲಿಂಗ ಕಾಪಸೆ, ಶ್ರೀ ಬಿ.ಎನ್. ಬೆಟ್‌ಕೆರೂರ್ ಅವರುಗಳು

ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮುಖ್ಯಸ್ಥರಿಗಾಗಿ ಏರ್ಪಡಿಸಿದ್ದ ಪುನಶ್ಚೇತನ ಶಿಬಿರದ ಸಮಾರೋಪ ಸಮಾರಂಭ ದಲ್ಲಿ ಶಿಕ್ಷಣ ಸಚಿವರಾದ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಭಾಷಣ ನೀಡುತ್ತಿದ್ದಾರೆ. ಚಿತ್ರದಲ್ಲಿ ಸುತ್ತೂರು ಶ್ರೀಗಳವರು, ಶ್ರೀ ಸಿದ್ಧೇಶ್ವರ ಸ್ವಾಮಿಗಳವರು, ಸಾಹಿತಿ ಶ್ರೀ ಜಯಂತ್ ಕಾಯ್ಕಿಣಿ, ಪ್ರೊ. ಎಂ. ಎಚ್. ಧನಂಜಯ ರವರನ್ನು ಕಾಣಬಹುದು

ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಮತ್ತು ಬಸವ ಸಮಿತಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಜರುಗಿದ ಘನಲಿಂಗ ಶಿವಯೋಗಿಗಳ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಓ.ಎಲ್. ನಾಗಭೂಷಣಸ್ವಾಮಿಯವರು ಸಮಾರೋಪ ಭಾಷಣ ಮಾಡುತ್ತಿರುವುದು. ಚಿತ್ರದಲ್ಲಿ ಬೆಂಗಳೂರು ಶ್ರೀ ಬೇಲಿಮಠದ ಶಿವಾನುಭವ ಚರಮೂರ್ತಿ ಶ್ರೀ ಶಿವರುದ್ರಸ್ವಾಮಿಗಳು, ನಿವೃತ್ತ ಪ್ರಾಧ್ಯಾಪಕ ಡಾ. ಎಸ್.ಎಂ. ವೃಷಭೇಂದ್ರಸ್ವಾಮಿ ಮತ್ತು ಬಸವಸಮಿತಿ ಅಧ್ಯಕ್ಷರಾದ ಶ್ರೀ ಅರವಿಂದ ಜತ್ತಿ ಅವರನ್ನು ಕಾಣಬಹುದು

ಸುತ್ತೂರು ಶ್ರೀಕ್ಷೇತ್ರದಲ್ಲಿ ಸಾರ್ವಜನಿಕರಿಗಾಗಿ ಏರ್ಪಡಿಸಿದ್ದ ವ್ಯಕ್ತಿತ್ವ ವಿಕಸನ ಶಿಬಿರವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಕೆ.ಎಂ. ಶಿವಕುಮಾರ್‌ರವರು ಉದ್ಘಾಟಿಸಿದರು. ಚಿತ್ರದಲ್ಲಿ ಪೂಜ್ಯ ಶ್ರೀ ಸಿದ್ಧೇಶ್ವರ ಸ್ವಾಮಿಗಳು ಮಲೆಯೂರು ಶ್ರೀ ಜೈನ ಮಠದ ಸ್ವಸ್ತಿಶ್ರೀ ಭುವನಕೀರ್ತಿ ಭಟ್ಟಾರಕ ಸ್ವಾಮಿಗಳವರು, ಕೃಷಿ ಇಲಾಖೆಯ ಆಯುಕ್ತರಾದ ಡಾ. ಸಿ. ಸೋಮಶೇಖರ್‌ರವರು, ಶ್ರೀ ಕುಮಾರ್ ರಾಜಶೇಖರ್‌ರವರನ್ನು ಕಾಣಬಹುದು

ಸಂಪಾದಕ: ಆರ್.ಎಸ್. ಪೂರ್ಣಾನಂದ

ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

ದೂರವಾಣಿ: 2548211, 2548212 ಫ್ಯಾಕ್ಸ್: 2548218 e-mail: jsspbln@yahoo.com ಮುದ್ರಣ: ಭಾಸ್ಕರ್ ಪ್ರಿಂಟರ್ಸ್, ಮೈಸೂರು